	2) ಮುಖ್ಯಾಧಿಕಾರಿ, ಪುರಸಭೆ ಗಜೇಂದ್ರಗಡ ದೂರವಾಣಿ ಸಂಖ್ಯೆ–08381–262222	

ಕ್ರಮ ಸಂಖ್ಯೆ	ಸ್ಥಳೀಯ ಸಂಸ್ಥೆಗಳ ವಿವರ ಮತ್ತು ದೂರವಾಣಿ ಸಂಖ್ಯೆ	ಸಹಾಯಕ ನಿರ್ದೇಶಕರ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ
	3) ಮುಖ್ಯಾಧಿಕಾರಿ, ಪುರಸಭೆ ಲಕ್ಷ್ಮೇಶ್ವರ ದೂರವಾಣಿ ಸಂಖ್ಯೆ–08487–272916	
	4) ಮುಖ್ಯಾಧಿಕಾರಿ, ಪುರಸಭೆ ಮುಂಡರಗಿ ದೂರವಾಣಿ ಸಂಖ್ಯೆ–08371–262232	
	5) ಮುಖ್ಯಾಧಿಕಾರಿ, ಪುರಸಭೆ ರೋಣ ದೂರವಾಣಿ ಸಂಖ್ಯೆ–08381–267234	
	6) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಮುಳಗುಂದ ದೂರವಾಣಿ ಸಂಖ್ಯೆ–08372–280128	
	7) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ನರಗುಂದ ದೂರವಾಣಿ ಸಂಖ್ಯೆ–08377–244227	
	8) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ನರೇಗಲ್ ದೂರವಾಣಿ ಸಂಖ್ಯೆ–08381–268228	
	9) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಶಿರಹಟ್ಟಿ ದೂರವಾಣಿ ಸಂಖ್ಯೆ–08487–262238	
17	1) ಆಯುಕ್ತರು, ಮಹಾನಗರಪಾಲಿಕೆ ಗುಲ್ಬರ್ಗಾ ದೂರವಾಣಿ ಸಂಖ್ಯೆ–08472–278675	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಗುಲ್ಬರ್ಗಾ ದೂರವಾಣಿ ಸಂಖ್ಯೆ –08472–221286
	2) ಆಯುಕ್ತರು, ನಗರಸಭೆ ಶಹಬಾದ ದೂರವಾಣಿ ಸಂಖ್ಯೆ–08474–204439	
	3) ಮುಖ್ಯಾಧಿಕಾರಿ, ಪುರಸಭೆ ಆಳಂದ ದೂರವಾಣಿ ಸಂಖ್ಯೆ–08477–202440/202450	
	4) ಮುಖ್ಯಾಧಿಕಾರಿ, ಪುರಸಭೆ ಚಿತ್ತಾಪುರ ದೂರವಾಣಿ ಸಂಖ್ಯೆ–08474–236142	
	5) ಮುಖ್ಯಾಧಿಕಾರಿ, ಪುರಸಭೆ ಸೇಡಂ ದೂರವಾಣಿ ಸಂಖ್ಯೆ–08441–276932/277912	
	6) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಚಿಂಚೋಳಿ ದೂರವಾಣಿ ಸಂಖ್ಯೆ–08475–273058	
	7) ಮುಖ್ಯಾಧಿಕಾರಿ, ಪುರಸಭೆ ವಾಡಿ ದೂರವಾಣಿ ಸಂಖ್ಯೆ–08476–202030	
	8) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಜೇವರ್ಗಿ ದೂರವಾಣಿ ಸಂಖ್ಯೆ–08442–236646	
	9) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಅಫಜಲ್‌ಪುರ ದೂರವಾಣಿ ಸಂಖ್ಯೆ–08470–283046	
	10) ಮುಖ್ಯಾಧಿಕಾರಿ, ಅಧಿಸೂಚಿತ ಪ್ರದೇಶ ಸಮಿತಿ, ಶಹಬಾದ ದೂರವಾಣಿ ಸಂಖ್ಯೆ	
18	1) ಆಯುಕ್ತರು, ನಗರಸಭೆ ಹಾಸನ ದೂರವಾಣಿ ಸಂಖ್ಯೆ–08172–268276	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಹಾಸನ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಹಾಸನ ದೂರವಾಣಿ ಸಂಖ್ಯೆ –08172–268799
	2) ಮುಖ್ಯಾಧಿಕಾರಿ, ಪುರಸಭೆ ಬೇಲೂರು ದೂರವಾಣಿ ಸಂಖ್ಯೆ–08177–222221	
	3) ಮುಖ್ಯಾಧಿಕಾರಿ, ಪುರಸಭೆ ಅರಸೀಕೆರೆ ದೂರವಾಣಿ ಸಂಖ್ಯೆ–08174–232201	
	4) ಮುಖ್ಯಾಧಿಕಾರಿ, ಪುರಸಭೆ ಚನ್ನರಾಯಪಟ್ಟಣ ದೂರವಾಣಿ ಸಂಖ್ಯೆ–08176–255411	

ಕ್ರಮ ಸಂಖ್ಯೆ	ಸ್ಥಳೀಯ ಸಂಸ್ಥೆಗಳ ವಿವರ ಮತ್ತು ದೂರವಾಣಿ ಸಂಖ್ಯೆ	ಸಹಾಯಕ ನಿರ್ದೇಶಕರ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ
	5) ಮುಖ್ಯಾಧಿಕಾರಿ, ಪುರಸಭೆ ಹೊಳೆನರಸೀಪುರ ದೂರವಾಣಿ ಸಂಖ್ಯೆ–08175–273229	
	6) ಮುಖ್ಯಾಧಿಕಾರಿ, ಪುರಸಭೆ ಸಕಲೇಶಪುರ ದೂರವಾಣಿ ಸಂಖ್ಯೆ–08173–244042	
	7) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಆಲೂರು ದೂರವಾಣಿ ಸಂಖ್ಯೆ–08170–218246	
	8) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಅರಕಲಗೂಡು ದೂರವಾಣಿ ಸಂಖ್ಯೆ–08175–220350	
19	1) ಆಯುಕ್ತರು, ನಗರಸಭೆ ಹಾವೇರಿ ದೂರವಾಣಿ ಸಂಖ್ಯೆ–08375–232444	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಹಾವೇರಿ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಹಾವೇರಿ. ದೂರವಾಣಿ ಸಂಖ್ಯೆ –08375–249293
	2) ಆಯುಕ್ತರು, ನಗರಸಭೆ ರಾಣಿಬೆನ್ನೂರು ದೂರವಾಣಿ ಸಂಖ್ಯೆ–08373–266575	
	3) ಮುಖ್ಯಾಧಿಕಾರಿ, ಪುರಸಭೆ ಬ್ಯಾಡಗಿ ದೂರವಾಣಿ ಸಂಖ್ಯೆ–08375–226444/228444	
	4) ಮುಖ್ಯಾಧಿಕಾರಿ, ಪುರಸಭೆ ಹಾನಗಲ್ ದೂರವಾಣಿ ಸಂಖ್ಯೆ–08379–262274	
	5) ಮುಖ್ಯಾಧಿಕಾರಿ, ಪುರಸಭೆ ಹಿರೇಕೆರೂರು ದೂರವಾಣಿ ಸಂಖ್ಯೆ–08376–282382	
	6) ಮುಖ್ಯಾಧಿಕಾರಿ, ಪುರಸಭೆ ಸವಣೂರು ದೂರವಾಣಿ ಸಂಖ್ಯೆ–08378–241623	
	7) ಮುಖ್ಯಾಧಿಕಾರಿ, ಪುರಸಭೆ ಶಿಗ್ಗಾಂವ ದೂರವಾಣಿ ಸಂಖ್ಯೆ–08378–255250	
	8) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಬಂಕಾಪುರ ದೂರವಾಣಿ ಸಂಖ್ಯೆ–08378–254231	
20	1) ಆಯುಕ್ತರು, ನಗರಸಭೆ ಮಡಿಕೇರಿ ದೂರವಾಣಿ ಸಂಖ್ಯೆ–08272–228323	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಮಡಿಕೇರಿ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಮಡಿಕೇರಿ ದೂರವಾಣಿ ಸಂಖ್ಯೆ –08272–228678
	2) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಕುಶಾಲನಗರ ದೂರವಾಣಿ ಸಂಖ್ಯೆ–08276–274336	
	3) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಸೋಮವಾರಪೇಟೆ ದೂರವಾಣಿ ಸಂಖ್ಯೆ–08276–282037	
	4) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ವಿರಾಜಪೇಟೆ ದೂರವಾಣಿ ಸಂಖ್ಯೆ–08274–257332	
21	1) ಆಯುಕ್ತರು, ನಗರಸಭೆ ಕೋಲಾರ ದೂರವಾಣಿ ಸಂಖ್ಯೆ–08152–227999/2220007	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಕೋಲಾರ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಕೋಲಾರ ದೂರವಾಣಿ ಸಂಖ್ಯೆ –08512–224729
	2) ಆಯುಕ್ತರು, ನಗರಸಭೆ ಕೆಜಿಎಫ್ ದೂರವಾಣಿ ಸಂಖ್ಯೆ–08153–270606	
	3) ಮುಖ್ಯಾಧಿಕಾರಿ, ಪುರಸಭೆ ಬಂಗಾರುಪೇಟೆ ದೂರವಾಣಿ ಸಂಖ್ಯೆ–08153–253222	
	4) ಮುಖ್ಯಾಧಿಕಾರಿ, ಪುರಸಭೆ ಮಾಲೂರು ದೂರವಾಣಿ ಸಂಖ್ಯೆ–08151–232847	
	5) ಮುಖ್ಯಾಧಿಕಾರಿ, ಪುರಸಭೆ ಮುಳಬಾಗಿಲು ದೂರವಾಣಿ ಸಂಖ್ಯೆ–08159–242044/243844	

ಕ್ರಮ ಸಂಖ್ಯೆ	ಸ್ಥಳೀಯ ಸಂಸ್ಥೆಗಳ ವಿವರ ಮತ್ತು ದೂರವಾಣಿ ಸಂಖ್ಯೆ	ಸಹಾಯಕ ನಿರ್ದೇಶಕರ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ
	6) ಮುಖ್ಯಾಧಿಕಾರಿ, ಪುರಸಭೆ ಶ್ರೀನಿವಾಸಪುರ ದೂರವಾಣಿ ಸಂಖ್ಯೆ–08157–245160	
22	1) ಆಯುಕ್ತರು, ನಗರಸಭೆ ಕೊಪ್ಪಳ ದೂರವಾಣಿ ಸಂಖ್ಯೆ–08539–230192	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಕೊಪ್ಪಳ ದೂರವಾಣಿ ಸಂಖ್ಯೆ –08539–220202
	2) ಆಯುಕ್ತರು, ನಗರಸಭೆ ಗಂಗಾವತಿ ದೂರವಾಣಿ ಸಂಖ್ಯೆ–08533–230802	
	3) ಮುಖ್ಯಾಧಿಕಾರಿ, ಪುರಸಭೆ ಕುಷ್ಟಗಿ ದೂರವಾಣಿ ಸಂಖ್ಯೆ–08536–267041	
	4) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಯಲಬುರ್ಗ ದೂರವಾಣಿ ಸಂಖ್ಯೆ–08534–220138	
23	1) ಆಯುಕ್ತರು, ನಗರಸಭೆ ಮಂಡ್ಯ ದೂರವಾಣಿ ಸಂಖ್ಯೆ–08232–226749/224555	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಮಂಡ್ಯ ದೂರವಾಣಿ ಸಂಖ್ಯೆ –08232–222301
	2) ಮುಖ್ಯಾಧಿಕಾರಿ, ಪುರಸಭೆ ಕೆಆರ್ ಪೇಟೆ ದೂರವಾಣಿ ಸಂಖ್ಯೆ–08230–262214	
	3) ಮುಖ್ಯಾಧಿಕಾರಿ, ಪುರಸಭೆ ಮದ್ದೂರು ದೂರವಾಣಿ ಸಂಖ್ಯೆ–08232–232105	
	4) ಮುಖ್ಯಾಧಿಕಾರಿ, ಪುರಸಭೆ ಮಳವಳ್ಳಿ ದೂರವಾಣಿ ಸಂಖ್ಯೆ–08231–244909	
	5) ಮುಖ್ಯಾಧಿಕಾರಿ, ಪುರಸಭೆ ನಾಗಮಂಗಲ ದೂರವಾಣಿ ಸಂಖ್ಯೆ–08234–286022	
	6) ಮುಖ್ಯಾಧಿಕಾರಿ, ಪುರಸಭೆ ಪಾಂಡವಪುರ ದೂರವಾಣಿ ಸಂಖ್ಯೆ–08236–255137	
	7) ಮುಖ್ಯಾಧಿಕಾರಿ, ಪುರಸಭೆ ಶ್ರೀರಂಗಪಟ್ಟಣ ದೂರವಾಣಿ ಸಂಖ್ಯೆ–08236–253895/252026	
24	1) ಆಯುಕ್ತರು, ಮಹಾನಗರಪಾಲಿಕೆ ಮೈಸೂರು ದೂರವಾಣಿ ಸಂಖ್ಯೆ–0821–2418803	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಮೈಸೂರು ದೂರವಾಣಿ ಸಂಖ್ಯೆ –0821–2518280
	2) ಆಯುಕ್ತರು, ನಗರಸಭೆ ಹುಣಸೂರು ದೂರವಾಣಿ ಸಂಖ್ಯೆ–08222–252048	
	3) ಮುಖ್ಯಾಧಿಕಾರಿ, ಪುರಸಭೆ ಬನ್ನೂರು ದೂರವಾಣಿ ಸಂಖ್ಯೆ–08227–276058	
	4) ಮುಖ್ಯಾಧಿಕಾರಿ, ಪುರಸಭೆ ಕೆಆರ್‌ನಗರ ದೂರವಾಣಿ ಸಂಖ್ಯೆ–08223–262242	
	5) ಮುಖ್ಯಾಧಿಕಾರಿ, ಪುರಸಭೆ ನಂಜನಗೂಡು ದೂರವಾಣಿ ಸಂಖ್ಯೆ–08221–226236	
	6) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಹೆಚ್‌ಡಿ ಕೋಟೆ ದೂರವಾಣಿ ಸಂಖ್ಯೆ–08228–255317	
	7) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಪಿರಿಯಾಪಟ್ಟಣ ದೂರವಾಣಿ ಸಂಖ್ಯೆ–08223–273036	
	8) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಸರಗೂರು ದೂರವಾಣಿ ಸಂಖ್ಯೆ–08228–265532	
	9) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಟಿ.ನರಸೀಪುರ ದೂರವಾಣಿ ಸಂಖ್ಯೆ–08227–261232	

ಕ್ರಮ ಸಂಖ್ಯೆ	ಸ್ಥಳೀಯ ಸಂಸ್ಥೆಗಳ ವಿವರ ಮತ್ತು ದೂರವಾಣಿ ಸಂಖ್ಯೆ	ಸಹಾಯಕ ನಿರ್ದೇಶಕರ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ
25	1) ಆಯುಕ್ತರು, ನಗರಸಭೆ ರಾಯಚೂರು ದೂರವಾಣಿ ಸಂಖ್ಯೆ–08532–226768	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ರಾಯಚೂರು ಜಿಲ್ಲಾಧಿಕಾರಿಗಳ ಕಛೇರಿ ಆವರಣ, ರಾಯಚೂರು ದೂರವಾಣಿ ಸಂಖ್ಯೆ –08532–225954
	2) ಆಯುಕ್ತರು, ನಗರಸಭೆ ಸಿಂಧನೂರು ದೂರವಾಣಿ ಸಂಖ್ಯೆ–08535–221480	
	3) ಮುಖ್ಯಾಧಿಕಾರಿ, ಪುರಸಭೆ ದೇವದುರ್ಗ ದೂರವಾಣಿ ಸಂಖ್ಯೆ–08531–260087	
	4) ಮುಖ್ಯಾಧಿಕಾರಿ, ಪುರಸಭೆ ಲಿಂಗಸೂಗೂರು ದೂರವಾಣಿ ಸಂಖ್ಯೆ–08537–257240	
	5) ಮುಖ್ಯಾಧಿಕಾರಿ, ಪುರಸಭೆ ಮಾನ್ವಿ ದೂರವಾಣಿ ಸಂಖ್ಯೆ–08538–220700	
	6) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಮುದ್ಗಲ್ ದೂರವಾಣಿ ಸಂಖ್ಯೆ–08537–280571	
	7) ಮುಖ್ಯಾಧಿಕಾರಿಗಳು, ಅಧಿಸೂಚಿತ ಪ್ರದೇಶ ಸಮಿತಿ, ಹಟ್ಟಿ ಗೋಲ್ಡ ಮೈನ್ಸ್ ದೂರವಾಣಿ ಸಂಖ್ಯೆ	
26	1) ಆಯುಕ್ತರು, ನಗರಸಭೆ ರಾಮನಗರ ದೂರವಾಣಿ ಸಂಖ್ಯೆ–080–27276070	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ರಾಮನಗರ ನಂ.8, ಗಂಗಾಧರೇಶ್ವರ ನಿಲಯ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹಿಂಭಾಗ, ಬೋಜಣ್ಣ ಬಿಲ್ಡಿಂಗ್, ಐಜೂರು ದೂರವಾಣಿ ಸಂಖ್ಯೆ –080–27275301
	2) ಆಯುಕ್ತರು, ನಗರಸಭೆ ಚನ್ನಪಟ್ಟಣ ದೂರವಾಣಿ ಸಂಖ್ಯೆ–080–27251235	
	3) ಮುಖ್ಯಾಧಿಕಾರಿ, ಪುರಸಭೆ ಕನಕಪುರ ದೂರವಾಣಿ ಸಂಖ್ಯೆ–080–27522428	
	4) ಮುಖ್ಯಾಧಿಕಾರಿ, ಪುರಸಭೆ ಮಾಗಡಿ ದೂರವಾಣಿ ಸಂಖ್ಯೆ–080–27745221/27746748	
27	1) ಆಯುಕ್ತರು, ಮಹಾನಗರಪಾಲಿಕೆ, ಶಿವಮೊಗ್ಗ ದೂರವಾಣಿ ಸಂಖ್ಯೆ–08182–226565	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಶಿವಮೊಗ್ಗ ದೂರವಾಣಿ ಸಂಖ್ಯೆ –08182–270110
	2) ಆಯುಕ್ತರು, ನಗರಸಭೆ ಭದ್ರಾವತಿ ದೂರವಾಣಿ ಸಂಖ್ಯೆ–08282–266356	
	3) ಆಯುಕ್ತರು, ನಗರಸಭೆ ಸಾಗರ ದೂರವಾಣಿ ಸಂಖ್ಯೆ–08183–226021	
	4) ಮುಖ್ಯಾಧಿಕಾರಿ, ಪುರಸಭೆ ಶಿಕಾರಿಪುರ ದೂರವಾಣಿ ಸಂಖ್ಯೆ–08187–222221/222771	
	5) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಹೊಸನಗರ ದೂರವಾಣಿ ಸಂಖ್ಯೆ–08185–221081	
	6) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಜೋಗ್ ಕಾರ್ಗಲ್ ದೂರವಾಣಿ ಸಂಖ್ಯೆ–08186–240307	
	7) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಶಿರಾಳಕೊಪ್ಪ ದೂರವಾಣಿ ಸಂಖ್ಯೆ–08187–234550	
	8) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಸೊರಬ ದೂರವಾಣಿ ಸಂಖ್ಯೆ–08184–272232	
	9) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ತೀರ್ಥಹಳ್ಳಿ ದೂರವಾಣಿ ಸಂಖ್ಯೆ–08181–228221	
28	1) ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ದೂರವಾಣಿ ಸಂಖ್ಯೆ–0816–2278480	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ತುಮಕೂರು ಜಿಲ್ಲಾಧಿಕಾರಿಗಳ ಕಛೇರಿ ಆವರಣ, ತುಮಕೂರು ದೂರವಾಣಿ ಸಂಖ್ಯೆ –0816–2273781

ಕ್ರಮ ಸಂಖ್ಯೆ	ಸ್ಥಳೀಯ ಸಂಸ್ಥೆಗಳ ವಿವರ ಮತ್ತು ದೂರವಾಣಿ ಸಂಖ್ಯೆ	ಸಹಾಯಕ ನಿರ್ದೇಶಕರ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ
	2) ಆಯುಕ್ತರು, ನಗರಸಭೆ ತಿಪಟೂರು ದೂರವಾಣಿ ಸಂಖ್ಯೆ–08134–250785	
	3) ಆಯುಕ್ತರು, ನಗರಸಭೆ ಸಿರಾ ದೂರವಾಣಿ ಸಂಖ್ಯೆ–08135–277324	
	4) ಮುಖ್ಯಾಧಿಕಾರಿ, ಪುರಸಭೆ ಚಿಕ್ಕನಾಯಕನಹಳ್ಳಿ ದೂರವಾಣಿ ಸಂಖ್ಯೆ–08133–267223	
	5) ಮುಖ್ಯಾಧಿಕಾರಿ, ಪುರಸಭೆ ಕುಣಿಗಲ್ ದೂರವಾಣಿ ಸಂಖ್ಯೆ–08132–220225/221835/222206	
	6) ಮುಖ್ಯಾಧಿಕಾರಿ, ಪುರಸಭೆ ಮಧುಗಿರಿ ದೂರವಾಣಿ ಸಂಖ್ಯೆ–08137–282328	
	7) ಮುಖ್ಯಾಧಿಕಾರಿ, ಪುರಸಭೆ ಪಾವಗಡ ದೂರವಾಣಿ ಸಂಖ್ಯೆ–08136–244569	
	8) ಮುಖ್ಯಾಧಿಕಾರಿ, ಪುರಸಭೆ ತುರುವೇಕೆರೆ ದೂರವಾಣಿ ಸಂಖ್ಯೆ–08139–287328	
	9) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಗುಬ್ಬಿ ದೂರವಾಣಿ ಸಂಖ್ಯೆ–08131–222248	
	10) ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಕೊರಟಗೆರೆ ದೂರವಾಣಿ ಸಂಖ್ಯೆ–08138–233329	
29	1) ಆಯುಕ್ತರು, ನಗರಸಭೆ, ಉಡುಪಿ ದೂರವಾಣಿ ಸಂಖ್ಯೆ–0820–2520306/2593364	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಮಣಿಪಾಲ್ ಉಡುಪಿ ಜಿಲ್ಲೆ ದೂರವಾಣಿ ಸಂಖ್ಯೆ –0820–2574840
	2) ಮುಖ್ಯಾಧಿಕಾರಿ, ಪುರಸಭೆ ಕಾರ್ಕಳ ದೂರವಾಣಿ ಸಂಖ್ಯೆ–08258–235664	
	3) ಮುಖ್ಯಾಧಿಕಾರಿ, ಪುರಸಭೆ ಕುಂದಾಪುರ ದೂರವಾಣಿ ಸಂಖ್ಯೆ–08254–230410	
	4) ಮುಖ್ಯಾಧಿಕಾರಿ, ಪುರಸಭೆ ಸಾಲಿಗ್ರಾಮ ದೂರವಾಣಿ ಸಂಖ್ಯೆ–0820–2564229	
30	1) ಆಯುಕ್ತರು, ನಗರಸಭೆ, ಕಾರವಾರ ದೂರವಾಣಿ ಸಂಖ್ಯೆ–08382–227900	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಕಾರವಾರ ನಂ.1719/1, ನೇತೂಕರ್ ಬಿಲ್ಡಿಂಗ್, ಎರಡನೇ ಮಹಡಿ, ಹಬ್ಬೂವಾಡ, ಕಾರವಾರ ಉತ್ತರ ಕನ್ನಡ ಜಿಲ್ಲೆ. ದೂರವಾಣಿ ಸಂಖ್ಯೆ –08382–226954
	2) ಆಯುಕ್ತರು, ನಗರಸಭೆ, ಭಟ್ಕಳ್ ದೂರವಾಣಿ ಸಂಖ್ಯೆ–08385–226408	
	3) ಆಯುಕ್ತರು, ನಗರಸಭೆ, ದಾಂಡೇಲಿ ದೂರವಾಣಿ ಸಂಖ್ಯೆ–08284–231482	
	4) ಆಯುಕ್ತರು, ನಗರಸಭೆ, ಸಿರ್ಸಿ ದೂರವಾಣಿ ಸಂಖ್ಯೆ–08384–226338	
	5) ಮುಖ್ಯಾಧಿಕಾರಿ, ಪುರಸಭೆ ಅಂಕೋಲ ದೂರವಾಣಿ ಸಂಖ್ಯೆ–08388–230268	
	6) ಮುಖ್ಯಾಧಿಕಾರಿ, ಪುರಸಭೆ ಹಳಿಯಾಳ ದೂರವಾಣಿ ಸಂಖ್ಯೆ–08284–220123	
	7) ಮುಖ್ಯಾಧಿಕಾರಿ, ಪುರಸಭೆ ಹೊನ್ನಾವರ ದೂರವಾಣಿ ಸಂಖ್ಯೆ–08387–220230	
	8) ಮುಖ್ಯಾಧಿಕಾರಿ, ಪುರಸಭೆ ಕುಮಟ ದೂರವಾಣಿ ಸಂಖ್ಯೆ–08386–222020/224550	

ಕ್ರಮ ಸಂಖ್ಯೆ	ಸ್ಥಳೀಯ ಸಂಸ್ಥೆಗಳ ವಿವರ ಮತ್ತು ದೂರವಾಣಿ ಸಂಖ್ಯೆ	ಸಹಾಯಕ ನಿರ್ದೇಶಕರ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ
	9) ಮುಖ್ಯಾಧಿಕಾರಿ, ಪುರಸಭೆ ಮುಂಡಗೋಡ ದೂರವಾಣಿ ಸಂಖ್ಯೆ–08301–222127	
	10) ಮುಖ್ಯಾಧಿಕಾರಿ, ಪುರಸಭೆ ಸಿದ್ದಾಪುರ ದೂರವಾಣಿ ಸಂಖ್ಯೆ–08389–230282	
	11) ಮುಖ್ಯಾಧಿಕಾರಿ, ಪುರಸಭೆ ಯಲ್ಲಾಪುರ ದೂರವಾಣಿ ಸಂಖ್ಯೆ–08419–261152	
31	1) ಆಯುಕ್ತರು, ನಗರಸಭೆ, ಯಾದಗಿರಿ ದೂರವಾಣಿ ಸಂಖ್ಯೆ–08473–252312	ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ– ಋಣ ನಿರ್ವಹಣೆ, ಯಾದಗಿರಿ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಯಾದಗಿರಿ ದೂರವಾಣಿ ಸಂಖ್ಯೆ –08473–253726
	2) ಮುಖ್ಯಾಧಿಕಾರಿ, ಪುರಸಭೆ ಗುರುಮಿಟ್ಕಲ್ ದೂರವಾಣಿ ಸಂಖ್ಯೆ–08473–225024	
	3) ಮುಖ್ಯಾಧಿಕಾರಿ, ಪುರಸಭೆ ಶಹಾಪುರ ದೂರವಾಣಿ ಸಂಖ್ಯೆ–08479–240143	
	4) ಮುಖ್ಯಾಧಿಕಾರಿ, ಪುರಸಭೆ ಸುರಪುರ ದೂರವಾಣಿ ಸಂಖ್ಯೆ–08443–256062	
	5) ಮುಖ್ಯಾಧಿಕಾರಿ, ಅಧಿಸೂಚಿತ ಪ್ರದೇಶ ಸಮಿತಿ, ಭೀಮರಾಯನಗುಡಿ ದೂರವಾಣಿ ಸಂಖ್ಯೆ	

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಆಡಳಿತ & ಮುಂಗಡ)

ಸರ್ಕಾರದ ಆದೇಶ ಸಂಖ್ಯೆ: 331 ರಾಲೆಪ2013, ದಿನಾಂಕ:23/10/2014 ರ ಅನುಬಂಧ–2

ಮುನ್ಸಿಪಲ್ ನೌಕರರ ಪಿಂಚಣಿ ಇತ್ಯರ್ಥದ ಕೈಪಿಡಿ

1) ಮುನಿಸಿಪಲ್ ನೌಕರರ ಪಿಂಚಣಿ ಪ್ರಕರಣಗಳನ್ನು ಇತ್ಯರ್ಥ ಮಾಡುವ ಕೆಲಸವನ್ನು 1980ನೇ ಇಸವಿಯವರೆಗೆ ಕರ್ನಾಟಕ ರಾಜ್ಯದ ಮಹಾಲೇಖಾಪಾಲರು ನೋಡಿಕೊಳ್ಳುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ:HUD 677 MLR 77 ದಿನಾಂಕ:03.01.1980ರಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ವಹಿಸಿಕೊಡಲಾಯಿತು. ರಾಜ್ಯ ಲೆಕ್ಕಪತ್ರ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಮಟ್ಟದ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗಳ ಕಚೇರಿ ಮುಖ್ಯಸ್ಥರಾದ ಸಹಾಯಕ ನಿಯಂತ್ರಕರು (Assistant Controller) ಪಿಂಚಣಿ ಪಾವತಿ ಆದೇಶ (Pension payment order)ಗಳನ್ನು ಹೊರಡಿಸುತ್ತಿದ್ದು, ಮುನಿಸಿಪಲ್ ನೌಕರರಿಗೂ ಸಹಾ ರಾಜ್ಯ ಸಂಚಿತ ನಿಧಿಯಿಂದ 2071–01–110–1–01 ರಿಂದ 04 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡಲಾಗುತ್ತಿದೆ. ಈ ಕಾರ್ಯವನ್ನು ದಿನಾಂಕ 01.01.2015 ರಿಂದ ಜಾರಿಗೆ ಬರುವಂತೆ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆಗೆ ವರ್ಗಾಯಿಸಿದೆ. ಮುನಿಸಿಪಾಲಿಟಿಗಳು ಪಿಂಚಣಿ ವಂತಿಗೆಯನ್ನು ಪಾವತಿ ಮಾಡಿರುವುದಿಲ್ಲವೆಂಬ ಕಾರಣಕ್ಕಾಗಿ ಮುನಿಸಿಪಲ್ ನೌಕರರಿಗೆ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡದೆ ತಡೆಹಿಡಿಯಲು ಆಗುವುದಿಲ್ಲ. ಈ ಸಂಬಂಧ ಪಿಂಚಣಿ ಪ್ರಾಧಿಕರಣ ಕಾರ್ಯಕ್ಕೆ ಸರ್ಕಾರವು ಖಜಾನೆ ಸಂಹಿತೆಯ ಅನುಚ್ಛೇದ 165(1)ರಡಿಯ ಟಿಪ್ಪಣಿಯನ್ನು ತಿದ್ದುಪಡಿ ಮಾಡಲಾಗಿದೆ. ಬೆಂಗಳೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯನ್ನು ಹೊರತು ಪಡಿಸಿ ಉಳಿದ ಮಹಾನಗರ ಪಾಲಿಕೆಗಳ ನೌಕರರ ಪಿಂಚಣಿಯನ್ನು ಸಹ ಜಿಲ್ಲೆಗಳಲ್ಲಿರುವ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆಯ ಸಹಾಯಕ ನಿರ್ದೇಶಕರುಗಳು ಇತ್ಯರ್ಥಗೊಳಿಸುತ್ತಾರೆ.

1.2 ಮುನಿಸಿಪಲ್ ನೌಕರರ ಪಿಂಚಣಿ ಪ್ರಕರಣಗಳ ಇತ್ಯರ್ಥದ ಕೆಲಸವನ್ನು ರಾಜ್ಯ ಲೆಕ್ಕಪತ್ರ ಇಲಾಖೆಯ ಅಧೀನ ಕಚೇರಿಗಳಾದ ಜಿಲ್ಲಾ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗಳ ಸಹಾಯಕ ನಿಯಂತ್ರಕರಿಗೆ 1980ನೇ ಇಸವಿಯಲ್ಲಿ ವಹಿಸಿಕೊಟ್ಟಾಗ ರಾಜ್ಯದಲ್ಲಿನ ಮುನಿಸಿಪಲ್ ನೌಕರರಿಗೆ ಕೆಳಕಂಡ ನಿಯಮಗಳು ಅನ್ವಯವಾಗುತ್ತಿತ್ತು.

(i) ಕರ್ನಾಟಕ ಮುನಿಸಿಪಾಲಿಟಿಗಳ (ಆರ್‌ಓಎಸ್) (Recruitment of servants) ನಿಯಮಗಳು (ದಿನಾಂಕ:2–9–1971ರಿಂದ ದಿನಾಂಕ:7–7–2004 ರವರೆಗೆ ಜಾರಿಯಲ್ಲಿತ್ತು)

(ii) ಕರ್ನಾಟಕ ಮುನಿಸಿಪಾಲಿಟಿಗಳ(ಸಿಎಸ್‌ಓಎಸ್) (Conditions of services of officers and servants) (ದಿನಾಂಕ:22–5–72 ರಿಂದ 03–02–1987ರವರೆಗೆ ಜಾರಿಯಲ್ಲಿತ್ತು).

1.3. ನಂತರದಲ್ಲಿ 1980ನೇ ಇಸವಿಯಲ್ಲಿ ಮೈಸೂರು / ಮಂಗಳೂರು / ಗುಲ್ಬರ್ಗ ನಗರಸಭೆ (City Municipality)ಗಳನ್ನು ನಗರ ಪಾಲಿಕೆ (City Corporations) ಎಂದು ಮೇಲ್ದರ್ಜೆಗೆ (Upgrade) ಮಾಡಿದ ನಂತರದಲ್ಲಿ ನಗರ ಪಾಲಿಕೆ ನೌಕರರಿಗೆಂದು ಯಾವುದೇ ಪ್ರತ್ಯೇಕವಾದ ಸೇವಾ ನಿಯಮಗಳು ಇರಲಿಲ್ಲವಾದ ಕಾರಣದಿಂದ ಕರ್ನಾಟಕ ನಗರಪಾಲಿಕೆ ಕಾಯ್ದೆ 1976 (Karnataka Municipal Corporation Act, 1976)ರ 501ನೇ ಕಲಂನಂತೆ ಮೈಸೂರು / ಮಂಗಳೂರು / ಗುಲ್ಬರ್ಗ ನಗರಪಾಲಿಕೆ ನೌಕರರಿಗೂ ಸಹಾ 1971ರ (Ros) ನಿಯಮಗಳು ಮತ್ತು 1972ರ (CSOS) ನಿಯಮಗಳನ್ನು ಅನ್ವಯಿಸಿ ಪಿಂಚಣಿ ಪ್ರಕರಣಗಳನ್ನು ಇತ್ಯರ್ಥ ಮಾಡಲಾಯಿತು.

1.4. 1983ರಲ್ಲಿ ಜಿಲ್ಲಾ ಪಂಚಾಯತ್ ಕಾಯ್ದೆಯು ಜಾರಿಗೆ ಬಂದ ನಂತರ ಕೆಲವು ಮುನಿಸಿಪಾಲಿಟಿಗಳನ್ನು ಮಧ್ಯಂತರ ಮಂಡಲ ಪಂಚಾಯತಿಗಳೆಂದು ಘೋಷಿಸಲಾಯಿತು. ಆದರೆ ಮುನಿಸಿಪಾಲಿಟಿಗಳು ಮಂಡಲ ಪಂಚಾಯತಿಗಳೆಂದು ಪರಿವರ್ತನೆಯಾಗಿದ್ದರೂ ಸರ್ಕಾರ ಗ್ರಾಮೀಣಾಭಿವೃದ್ಧಿ ಇಲಾಖೆಯವರು ದಿನಾಂಕ:09–09–92ರಲ್ಲಿ ಆದೇಶ ನೀಡುವ ಮೂಲಕ ಮುನಿಸಿಪಲ್ ನೌಕರರು ಮಂಡಲ ಪಂಚಾಯತಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕಾಗಿ "ಅರ್ಹಸೇವೆ" ಎಂದು ಪರಿಗಣಿಸಲು ಅನುವು ಮಾಡಿಕೊಡಲಾಯಿತು.

1.5. ಇದೇ ರೀತಿಯಲ್ಲಿ ಮುನಿಸಿಪಾಲಿಟಿಗಳು ಪಂಚಾಯತಿಯಾಗಿ ಪರಿವರ್ತನೆಯಾಗಿದ್ದರೂ ಅಥವಾ ಪಂಚಾಯತಿಯು ಮುನಿಸಿಪಾಲಿಟಿಯಾಗಿ ಪರಿವರ್ತನೆಯಾಗಿದ್ದರೂ (1964 ಮುನಿಸಿಪಲ್ ಕಾಯ್ದೆಯ 357[(ಜಿ) ಕಲಂ)] ಪರಿವರ್ತನೆಯಾದ ನಂತರದಲ್ಲಿ ಸಲ್ಲಿಸಿರುವ ಸೇವೆಯನ್ನು ಅರ್ಹಸೇವೆ ಎಂದು ಪರಿಗಣಿಸಲು ದಿನಾಂಕ:28–5–1984ರ ಸರ್ಕಾರಿ ಆದೇಶದ ಮೂಲಕ ಮತ್ತು 1972ರ ಕಲಂ (ಸಿಎಸ್‌ಓಎಸ್) ನಿಯಮಗಳ 103 ಮತ್ತು 106ನೇ ನಿಯಮಗಳಿಗೆ ತಿದ್ದುಪಡಿ ಮಾಡುವ ಮೂಲಕ ಅನುವು ಮಾಡಿಕೊಡಲಾಯಿತು.

1.6. 1983ರ ಜಿಲ್ಲಾ ಪಂಚಾಯತ್ ಕಾಯ್ದೆಯು 1993ರಲ್ಲಿ ನಿರಶನ (Repeat)ಗೊಂಡು ಪಂಚಾಯತ್‌ರಾಜ್ ಕಾಯ್ದೆಯು ಜಾರಿಗೆ ಬಂದ ಪರಿಣಾಮವಾಗಿ 1993ರಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಮಧ್ಯಂತರ ಮಂಡಲ ಪಂಚಾಯತಿ(Interim Mandal Panchayaths)[ಹಿಂದೆ ಮುನಿಸಿಪಾಲಿಟಿಗಳಿಂದ ಮಂಡಲ ಪಂಚಾಯಿತಿಗಳಾಗಿ ಪರಿವರ್ತನೆಯಾದ ಸಂಸ್ಥೆಗಳು]ಗಳು ಗ್ರಾಮ ಪಂಚಾಯತಿಗಳಾಗಿ ಪರಿವರ್ತಿಸಲ್ಪಟ್ಟವು / ಘೋಷಿಸಲ್ಪಟ್ಟವು. ಈ ರೀತಿ ಪಂಚಾಯತಿಗಳಾಗಿ ಪರಿವರ್ತನೆಯಾದ ಮಂಡಲ ಪಂಚಾಯತಿಗಳಲ್ಲಿ (ಹಿಂದಿನ ಮುನಿಸಿಪಾಲಿಟಿಗಳು) ಮುನಿಸಿಪಲ್ ನೌಕರರು ಸಲ್ಲಿಸಿರುವ ಸೇವೆಯನ್ನು "ಅರ್ಹಸೇವೆ" ಎಂದು ಪರಿಗಣಿಸಲು ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯವರು ದಿನಾಂಕ:27.2.2006ರಲ್ಲಿ ಪತ್ರವನ್ನು ಉಲ್ಲೇಖಿಸಿ ದಿನಾಂಕ:15–07–2013 ರಂದು ಸ್ಪಷ್ಟೀಕರಣವನ್ನು ನೀಡಿರುತ್ತಾರೆ.

1.7. ಬೆಂಗಳೂರು ಜಿಲ್ಲೆಯಲ್ಲಿದ್ದ 8 ನಗರಸಭೆ / 1 ಪುರಸಭೆಯನ್ನು 2007ನೇ ಇಸವಿಯಲ್ಲಿ ಬೆಂಗಳೂರು ನಗರ ಪಾಲಿಕೆ (Corporation)ಯಲ್ಲಿ ವಿಲೀನಗೊಳಿಸಲಾಗಿ 2007ನೇ ಇಸವಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದಿರುತ್ತದೆ. ಬೆಂಗಳೂರು ನಗರ ಪಾಲಿಕೆ ನೌಕರರಿಗೆ ಹಿಂದಿನಿಂದಲೂ ನಗರ ಪಾಲಿಕೆ ನಿಧಿಯಿಂದಲೇ ಪಿಂಚಣಿ ಸೌಲಭ್ಯಗಳನ್ನು ಮಾಡಲಾಗುತ್ತಿದೆ. ಆದ್ದರಿಂದ, ಬೆಂಗಳೂರು ನಗರ ಜಿಲ್ಲೆಯಲ್ಲಿನ ಮುನಿಸಿಪಲ್ ನೌಕರರ ಪಿಂಚಣಿ ಪ್ರಕರಣಗಳ ಇತ್ಯರ್ಥದ ಕೆಲಸವು ರಾಜ್ಯ ಲೆಕ್ಕಪತ್ರ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

1.8. ಬಳ್ಳಾರಿ/ದಾವಣಗೆರೆ ನಗರ ಸಭೆಗಳು ನಗರಪಾಲಿಕೆಗಳಾಗಿ ಮೇಲ್ದರ್ಜೆಗೆ ಏರಿಸಲ್ಪಟ್ಟಿದ್ದರೂ ಈ ನಗರ ಸಭೆಗಳ ನೌಕರರಿಗೆ ಮೊದಲಿನಿಂದಲೂ ರಾಜ್ಯ ಸಂಚಿತ ನಿಧಿಯಿಂದ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡುತ್ತಿರುವುದರಿಂದ ನಗರ ಪಾಲಿಕೆಗಳ ಕಾಯ್ದೆ 1976ರ 501ನೇ ಕಲಂನಂತೆ ಬಳ್ಳಾರಿ / ದಾವಣಗೆರೆ ನಗರ ಪಾಲಿಕೆ ನೌಕರರಿಗೂ ಸಹಾ ರಾಜ್ಯ ಸಂಚಿತ ನಿಧಿಯಿಂದಲೇ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡಲು ನಗರಾಭಿವೃದ್ಧಿ ಇಲಾಖೆ ಸಚಿವಾಲಯದವರು ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಬಳ್ಳಾರಿ/ದಾವಣಗೆರೆ ಇವರಿಗೆ ಅನುಮತಿ ನೀಡಿರುತ್ತಾರೆ.

1.9 ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೂಲಕ ನೇಮಕಾತಿ ಮಾಡಿರುವ ಕೆಲವು ನೌಕರರು ಮುನಿಸಿಪಲ್ ಸೇವೆಯಲ್ಲಿ ವಿಲೀನ (absorption) ಗೊಂಡಿರುವ ಉದಾಹರಣೆಗಳು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ನೌಕರರು ಕೆಯುಡಬ್ಲ್ಯೂಎಸ್ ಅಂಡ್ ಡಿ ಬೋರ್ಡ್‌ನಲ್ಲಿ ಸಲ್ಲಿಸಿರುವ ಸೇವಾವಧಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ 235ನೇ ನಿಯಮದಂತೆ ಸಂಬಂದಪಟ್ಟ ಸಂಸ್ಥೆಯ ನಿಧಿಯಿಂದಲೇ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡಲು ಅಥವ ಅಂತಹ ನೌಕರರ ಸೇವಾವಧಿಯನ್ನು ಯಾವ ನಿಯಮದ ಪ್ರಕಾರ ಅರ್ಹ ಸೇವೆ ಎಂದು ಪರಿಗಣಿಸಬೇಕು? ಎಂಬ ಬಗ್ಗೆ ನಗರಾಭಿವೃದ್ಧಿ ಇಲಾಖೆಯಿಂದ ಮಾರ್ಗದರ್ಶನ ಪಡೆದುಕೊಳ್ಳಬಹುದು.

1.10 ಮುನಿಸಿಪಲ್ ಕಾಯ್ದೆಯ 365 ನೇ ವಿಧಿಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಕರ್ನಾಟಕ ಮುನಿಸಿಪಲ್ ಆಡಳಿತ ಸೇವೆ (ಕೆಎಂಎಎಸ್) ನೌಕರರಿಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರು ಪಿಂಚಣಿ ಸೌಲಭ್ಯವನ್ನು ಪಾವತಿ ಮಾಡುತ್ತಿಲ್ಲ.

1.11 ಅಂತಿಮವಾಗಿ 1980ನೇ ಇಸವಿಯಲ್ಲಿ ಮುನಿಸಿಪಲ್ ನೌಕರರ ಪ್ರಕರಣಗಳ ಇತ್ಯರ್ಥದ ಕೆಲಸವನ್ನು ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಗೆ ವಹಿಸಿಕೊಟ್ಟ ನಂತರ ಜಾರಿಗೆ ಬಂದಿರುವ ನೇಮಕಾತಿ ಮತ್ತು ಸೇವಾ ನಿಯಮಗಳ ವಿವರಗಳು ಈ ಕೆಳಕಂಡಂತಿರುತ್ತದೆ.

1) ಕರ್ನಾಟಕ ಮುನಿಸಿಪಲ್‌ಗಳ (ಸಿಓಎಸ್) (Condition of service) ನಿಯಮಾವಳಿಗಳು (ದಿನಾಂಕ;4–2–1987) ರಿಂದ ಜಾರಿಗೆ ಬಂದಿರುತ್ತದೆ.

2) ಕರ್ನಾಟಕ ನಗರ ಪಾಲಿಕೆ ನೌಕರರ (ಸಿಓಎಸ್) (Karnataka City Corporation Employees) (Conditions of service)ನಿಯಮಗಳು (Rule -1991) 1991 (ದಿನಾಂಕ 6.6.1991) ರಿಂದ ಜಾರಿಗೆ ಬಂದಿರುತ್ತದೆ)

3) ಕರ್ನಾಟಕ ಮುನಿಸಿಪಾಲಿಟಿಗಳ (ROE) (Recruitment of Officers and Employees) ನಿಯಮಗಳು, 2004(ದಿನಾಂಕ.8–7–2004) ರಿಂದ ಜಾರಿಗೆ ಬಂದಿರುತ್ತದೆ) (ನಿರಂತರ (Repeat) ಗೊಂಡಿರುತ್ತದೆ).

4) ಕರ್ನಾಟಕ ಮುನಿಸಿಪಾಲಿಟಿಗಳ (ROE) (Recruitment of Officers and Employees) ನಿಯಮಗಳು, 2010 (ದಿನಾಂಕ:22–10–2010 ರಿಂದ ಜಾರಿಗೆ ಬಂದಿರುತ್ತದೆ)

5) ಕರ್ನಾಟಕ ಮಹಾನಗರ ಪಾಲಿಕೆಗಳ (ಆರ್‌ಒಈ) (Karnataka City Corporation Employees Recruitment of Officers and Employees) 2011 ನಿಯಮಗಳು (ದಿನಾಂಕ: 21–04–2011ರಿಂದ) ಜಾರಿಗೆ ಬಂದಿರುತ್ತದೆ.

1.12 ಮುನಿಸಿಪಲ್ ನೌಕರರಿಗೆ ಅನ್ವಯವಾಗುವ / ವಿಸ್ತರಿಸಲ್ಪಟ್ಟಿರುವ ಇತರೆ ನಿಯಮಾವಳಿಗಳು/ ಸರ್ಕಾರಿ ಆದೇಶಗಳು,

1. KCS (Time Bond Advancement Rules, 1983.
2. KCS (Automatic promotion to senior scales of pay) Rul;es 1991)
3. Sanction of stagnation increments ಬಗ್ಗೆ ಹೊರಡಿಸಲಾಗಿರುವ ದಿನಾಂಕ:18–03–1996 ಮತ್ತು 14–06–2012ರ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶಗಳು.
4. 20 ವರ್ಷ, 25 ವರ್ಷ ಮತ್ತು 30 ವರ್ಷ ಸೇವೆಗಾಗಿ ಮಂಜೂರು ಮಾಡಲಾಗುವ ಹೆಚ್ಚುವರಿ ವೇತನ ಬಡ್ತಿಯ ಬಗ್ಗೆ ಆರ್ಥಿಕ ಇಲಾಖೆಯವರು ಹೊರಡಿಸಿರುವ ದಿನಾಂಕ: 09–05–2002 ಮತ್ತು 14–06–2012ರ ಸರ್ಕಾರಿ ಆದೇಶಗಳು.

2) ಮುನಿಸಿಪಲ್ ನೌಕರರು ಎಂಬುದನ್ನು ಕೆಳಕಂಡಂತೆ ವ್ಯಾಖ್ಯಾನಿಸಲಾಗುತ್ತದೆ.

- ಮುನಿಸಿಪಾಲಿಟಿಯಲ್ಲಿ ನೇರವಾಗಿ ನೇಮಕವಾಗಿ ಮುನಿಸಿಪಲ್ ಸೇವೆಯಿಂದ ನಿವೃತ್ತರಾಗುವವರು / ಸೇವೆಯಲ್ಲಿದ್ದಾಗ ನಿಧನರಾಗಿರುವವರು (ಇವರ ಬಗ್ಗೆ ಸಂಬಂಧಪಟ್ಟ ಮುನಿಸಿಪಾಲಿಟಿಯವರೇ ಪಿಂಚಣಿ ವಂತಿಗೆಯನ್ನು ಪಾವತಿ ಮಾಡಬೇಕಾಗುತ್ತದೆ).

2.2 ಪಟ್ಟಣ ಪಂಚಾಯತಿಗಳನ್ನು ಮುನಿಸಿಪಲ್ ಕಾಯ್ದೆಯ ವ್ಯಾಪ್ತಿಗೆ ತಂದಿರುವ ಪ್ರಯುಕ್ತ ಪಟ್ಟಣ ಪಂಚಾಯತಿಗಳಲ್ಲಿ ನೇಮಕವಾಗಿ ಪಟ್ಟಣ ಪಂಚಾಯತಿಯಲ್ಲಿಯೇ ನಿವೃತ್ತರಾಗಿರುವವರು / ನಿಧನರಾಗಿರುವವರು (ಸಂಬಂಧಪಟ್ಟ ಮುನಸಿಪಾಲಿಟಿಯವರೇ ಪಿಂಚಣಿ ವಂತಿಗೆಯನ್ನು ಪಾವತಿ ಮಾಡಬೇಕಾಗುತ್ತದೆ).

2.3 ಗ್ರಾಮ ಪಂಚಾಯತಿಯಲ್ಲಿ ನೇಮಕವಾಗಿ ಗ್ರಾಮ ಪಂಚಾಯತಿಯು ಪಟ್ಟಣ ಪಂಚಾಯತಿ / ಮುನಿಸಿಪಾಲಿಟಿಯಾಗಿ ಪರಿವರ್ತನೆ (Conversion) ಆದ ಪರಿಣಾಮವಾಗಿ ಪಟ್ಟಣ ಪಂಚಾಯತಿ / ಮುನಿಸಿಪಲ್ ನೌಕರರಾಗಿ ನಿವೃತ್ತ / ನಿಧನರಾಗುವವರು (ಸಂಬಂಧಪಟ್ಟ ಪಟ್ಟಣ ಪಂಚಾಯತಿ / ಮುನಿಸಿಪಲ್ ನಗರ ಪಾಲಿಕೆಗಳ ಕಾಯ್ದೆಯ 501ನೇ ಕಲಂನಂತೆ) ಪಿಂಚಣಿಯನ್ನು ಸಂಬಂಧಪಟ್ಟ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರು ಸಧ್ಯ ಇತ್ಯರ್ಥಪಡಿಸುತ್ತಿರುವರು.

2.4 ಮುನಸಿಪಾಲಿಟಿಯು ಪಟ್ಟಣ ಪಂಚಾಯತಿಯಾಗಿ ಪರಿವರ್ತನೆಯಾದಾಗ (ಸರ್ಕಾರದ ನಗರಾಭಿವೃದ್ಧಿ ಇಲಾಖೆಯವರು ದಿನಾಂಕ:28.05.2004ರ ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ) ಪಂಚಾಯಿತಿಯಲ್ಲಿ ಕೆಲಸ ಮಾಡಿರುವ ಅವಧಿಯೂ ಸೇರಿದಂತೆ ಒಟ್ಟು ಸೇವಾವಧಿಯನ್ನು ಪಿಂಚಣಿ ಸೌಲಭ್ಯಗಳಿಗಾಗಿ ಅರ್ಹ ಸೇವೆ ಎಂದು ಪರಿಗಣಿಸಲಾಗುವುದು.

2.5 ಮುನಿಸಿಪಾಲಿಟಿಯು ಗ್ರಾಮ ಪಂಚಾಯತಿಯಾಗಿ ಪರಿವರ್ತನೆಯಾದಾಗ ಅನುಸರಿಸಬೇಕಾದ ವಿಧಿವಿಧಾನಗಳ ಕುರಿತು 1993 ಪಂಚಾಯತ್ ರಾಜ್ ಕಾಯ್ದೆಯ 115ನೆ ಕಲಂನಲ್ಲಿ ಪ್ರಸ್ತಾಪಿಸಲಾಗಿದೆ. 1983ರ ಜಿಲ್ಲಾ ಪರಿಷತ್ ಕಾಯ್ದೆಯ ಪ್ರಕಾರ ಮಂಡಲ ಪಂಚಾಯಿತಿಯಾಗಿ ಪರಿವರ್ತನೆಯಾಗಿ ನಂತರ ಗ್ರಾಮ ಪಂಚಾಯತಿಯಾಗಿ ಪರಿವರ್ತನೆಯಾಗಿರುವ ಮುನಿಸಿಪಲ್ ನೌಕರರ ಪ್ರಕರಣಗಳಲ್ಲಿ ಗ್ರಾಮ ಪಂಚಾಯತಿಯಲ್ಲಿ ಸಲ್ಲಿಸಿರುವ ಸೇವಾವಧಿಯನ್ನು "ಅರ್ಹ ಸೇವೆ" ಎಂದು ಪರಿಗಣಿಸುವ ಬಗ್ಗೆ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಪತ್ರ ದಿನಾಂಕ: 27.02.2006ರಲ್ಲಿನ ಸೂಚನೆಗಳನ್ನು ಪಾಲಿಸಬಹುದು.

2.6 1980ನೇ ಇಸವಿಯವರೆಗೆ ಮುನಿಸಿಪಾಲಿಟಿಯಲ್ಲಿ ಜಾರಿಯಲ್ಲಿದ್ದ ಆಕ್ಟ್ರಾಯ್ (Octroi) ತೆರಿಗೆ ರದ್ದಾದ ಪರಿಣಾಮದಿಂದ ಸರ್ಕಾರಿ ಇಲಾಖೆಗಳಿಗೆ ನಿಯೋಜಿಸಲ್ಪಟ್ಟಿರುವ ಮುನಿಸಿಪಲ್ ನೌಕರರು ಸರ್ಕಾರಿ ಇಲಾಖೆಗಳಲ್ಲಿ ಸಲ್ಲಿಸಿರುವ ಸೇವೆಗೆ ಪಿಂಚಣಿ ವಂತಿಗೆಯನ್ನು ಪಾವತಿ ಮಾಡಬೇಕಾಗುತ್ತದೆ(ಪಂಚಾಯತಿಯು ಮುನಿಸಿಪಾಲಿಟಿಯಾಗಿ ಪರಿವರ್ತನೆಯಾದಾಗ ಆಗುವ ಪರಿಣಾಮಗಳ ಕುರಿತು ಕರ್ನಾಟಕ ಮುನಿಸಿಪಲ್ ಕಾಯ್ದೆಯ 357 (G) ಕಲಂನಲ್ಲಿ ಪ್ರಸ್ತಾಪಿಸಲಾಗಿದೆ).

2.7 ಒಂದು ಗ್ರಾಮ ಪಂಚಾಯತಿಯಿಂದ ಮುನಿಸಿಪಾಲಿಟಿಗೆ ವರ್ಗಾವಣೆಯಾದ ನಂತರ ಮುನಿಸಿಪಲ್ ನೌಕರನಾಗಿ ಸೇವೆಯಿಂದ ನಿವೃತ್ತರಾಗುವ/ಸೇವೆಯಲ್ಲಿದ್ದಂತೆ ನಿಧನರಾಗುವ ನೌಕರನನ್ನು ಸಹಾ ಮುನಿಸಿಪಲ್ ನೌಕರನೆಂದು ಪರಿಗಣಿಸಲಾಗುತ್ತದೆ. ಮುನಿಸಿಪಾಲಿಟಿಗೆ ವರ್ಗಾವಣೆಯಾಗುವ ಮೊದಲು ಗ್ರಾಮ ಪಂಚಾಯತಿಗಳಲ್ಲಿ ಸಲ್ಲಿಸಿರುವ ಸೇವಾವಧಿಗೆ ಸಂಬಂಧಪಟ್ಟ ನೌಕರನು ಪಿಂಚಣಿ ವಂತಿಗೆಯನ್ನು ಪಾವತಿ ಮಾಡಲೇಬೇಕಾಗುತ್ತದೆ(ಕರ್ನಾಟಕ ಮುನಿಸಿಪಲ್ (ಸಿಎಸ್‌ಓಎಸ್) ನಿಯಮಗಳು 1972, 103 ಮತ್ತು 106 ಹಾಗೂ ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 63 ಗ್ರಾಪಂಕಾ 2006, ದಿನಾಂಕ: 27.02.2006ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಪತ್ರ).

2.8 ನಗರ ಪಾಲಿಕೆಗಳಾಗಿ ಪರಿವರ್ತನೆಯಾಗಿರುವ ಮೈಸೂರು/ಮಂಗಳೂರು/ಗುಲ್ಬರ್ಗಾ/ದಾವಣಗೆರೆ/ಬಳ್ಳಾರಿ ನಗರ ಸಭೆಗಳ ನೌಕರರ ಪಿಂಚಣಿ ಪ್ರಕರಣಗಳನ್ನು (ಬೆಂಗಳೂರು/ ಧಾರವಾಡ/ ಬೆಳಗಾವಿ ಮಹಾ ನಗರಪಾಲಿಕೆ ನೌಕರರ ಪಿಂಚಣಿ ಪ್ರಕರಣಗಳನ್ನು ಹೊರತುಪಡಿಸಿ) ಸಹಾ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರು ಇತ್ಯರ್ಥ ಮಾಡುತ್ತಿದ್ದು, ಪಿಂಚಣಿ ಸೌಲಭ್ಯಗಳನ್ನು ರಾಜ್ಯ ಸಂಚಿತ ನಿಧಿಯಿಂದ ಪಾವತಿ ಮಾಡಲಾಗುತ್ತದೆ. (ನಗರಾಭಿವೃದ್ಧಿ ಇಲಾಖೆಯು ದಿನಾಂಕ:05.07.1980 ಮತ್ತು 04.09.1980ರ ಆದೇಶ ಹೊರಡಿಸಿದೆ)

2.9 ಉಳಿದಂತೆ ಆಕ್ಟ್ರಾಯ್ ಸಿಬ್ಬಂದಿಯನ್ನು ಹೊರತುಪಡಿಸಿ ಉಳಿದ ಮುನಿಸಿಪಲ್ ನೌಕರರು ಯಾರಾದರೂ ಸರ್ಕಾರಿ ಇಲಾಖೆಗಳಲ್ಲಿ/ಮುನಿಸಿಪಲ್ ನಿಧಿಯಿಂದ ಅಲ್ಲದೇ ಬೇರೆ ಯಾವುದೇ ನಿಧಿಯಿಂದ ವೆಚ್ಚ ಭರಿಸಲ್ಪಡುವ ವೇತನ ಮತ್ತು ಭತ್ಯೆಗಳನ್ನು ಪಡೆಯುವ ಇಲಾಖೆಗಳಲ್ಲಿ ಕೆಲಸ ಮಾಡಿದಲ್ಲಿ, ಅಂತಹ ಅನ್ಯ ಇಲಾಖೆಗಳಲ್ಲಿ ಸಲ್ಲಿಸಿರುವ ಸೇವೆಯನ್ನು "ಅರ್ಹ ಸೇವೆ" ಎಂದು ಪರಿಗಣಿಸುವ ಬಗ್ಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ 222ನೇ ನಿಯಮದಲ್ಲಿನ ಷರತ್ತುಗಳ ಬಗ್ಗೆ ಸಡಲಿಕೆ (Relaxation) ಪಡೆಯಬೇಕಾಗುತ್ತದೆ.

2.10 ದಿನಾಂಕ: 08.07.2004ರ ನಂತರ ಮುನಿಸಿಪಾಲಿಟಿ/ಪಟ್ಟಣ ಪಂಚಾಯತಿಗಳಲ್ಲಿ ಮತ್ತು ದಿನಾಂಕ: 10.04.2006ರ ನಂತರ ನಗರಪಾಲಿಕೆಗಳಲ್ಲಿ ನೇಮಕವಾಗಿರುವ ನೌಕರರಿಗೆ ಚಾಲ್ತಿಯಲ್ಲಿರುವ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಯಮಗಳು ಅನ್ವಯವಾಗುವುದಿಲ್ಲ.

2.11 ಮುನಿಸಿಪಲ್/ಪಟ್ಟಣ ಪಂಚಾಯತಿ ನೌಕರರಿಗೆ ದಿನಾಂಕ: 10.10.2000ರಿಂದ ಮಾತ್ರ ಸ್ಥಗಿತ ವೇತನ ಬಡ್ತಿ (Stagnation increment) ಲಭ್ಯವಿರುತ್ತದೆ.

3) ಮುನಿಸಿಪಾಲಿಟಿಗಳು / ನಗರಪಾಲಿಕೆ ನೌಕರರಿಗೆ ಕಾಲಕಾಲಕ್ಕೆ ಅನ್ವಯವಾಗುವ ಸೇವಾ ನಿಯಮಗಳು/ ವೃಂದ ಮತ್ತು ನೇಮಕಾತಿ ನಿಯಮಗಳ ಬಗ್ಗೆ ಕಚೇರಿಯ ಸುತ್ತೋಲೆ ಸಂಖ್ಯೆ: ರಾಲೆಪ ಮುಪಿಂಪ್ರ ಇತ್ಯರ್ಥ 2012-13, ದಿನಾಂಕ: 05.01.2012ರಲ್ಲಿ ವಿವರಗಳು ಲಭ್ಯವಿರುತ್ತದೆ.

ಅರ್ಹದಾಯಕ ಸೇವೆ ಲೆಕ್ಕಾಚಾರ ಮಾಡಲು ಪರಿಗಣಿಸಬೇಕಾದ ಅಂಶಗಳು

ದಿನಾಂಕ 01.01.1986ಕ್ಕೆ ಮೊದಲು ದಿನಗೂಲಿಯ ಮೇಲೆ ನೇಮಕವಾಗಿರುವ ನೌಕರರ ಸೇವೆಯನ್ನು HUD 301 MNE 95 ದಿನಾಂಕ 21.08.1995ರ ಸರ್ಕಾರಿ ಆದೇಶದ ಪ್ರಕಾರ ಮತ್ತು ದಿನಾಂಕ 01.01.1986 ಮತ್ತು ನಂತರದಲ್ಲಿ ದಿನಗೂಲಿಯ ಮೇಲೆ ನೇಮಕವಾಗಿರುವ HUD 677 MLR 77 ದಿನಾಂಕ 03.01.1980 ನೌಕರರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ ನಅಇ 95 ಬಿಎಂಎಸ್ 2005 (p-11) ದಿನಾಂಕ:15.11.2006 (ಸರ್ಕಾರದ ಸುತ್ತೋಲೆ ಕ್ರಮಾಂಕ ಸಿಆಸುಇ 25 ಸೇಸ 2003 ದಿನಾಂಕ 25.05.2006 ಮತ್ತು ದಿನಾಂಕ 06.07.2006ರ ಸುತ್ತೋಲೆಗಳೊಂದಿಗೆ ಓದಿಕೊಂಡಂತೆ) ಮತ್ತು ಸರ್ಕಾರದ ಪತ್ರ ಸಂಖ್ಯೆ:ನಅಇ 47 ಬಿಎಂಎಸ್ 2011 ದಿನಾಂಕ 03.06.2014ರ ಪ್ರಕಾರ ಸಕ್ರಗೊಳಿಸಬಹುದಾಗಿದೆ. ಸಕ್ರಮಗೊಳಿಸುವುದಕ್ಕೆ ಮೊದಲು ದಿನಗೂಲಿಯ ಅಡಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ 224-ಬಿ ನಿಯಮದಲ್ಲಿನ ಷರತ್ತುಗಳಲ್ಲದೆ ಈ ಕೆಳಗಿನವುಗಳನ್ನು ಪರಿಗಣಿಸಬೇಕು.

1) ಪತ್ರ ಸಂಖ್ಯೆ ಆಇ 1 ಸನಿತಿ 2008 ದಿನಾಂಕ 31.01.2008

2) ಸುತ್ತೋಲೆ ಸಂಖ್ಯೆ ಆಇ 03 ಸನಿತಿ 2008 ದಿನಾಂಕ 27.06.2008

3) ಅಧಿಕೃತ ಜ್ಞಾಪನ ಸಂಖ್ಯೆ ಎಫ್‌ಡಿ 04 ಎಸ್‌ಆರ್‌ಎ 2010 ದಿನಾಂಕ 16.02.2012

4) ಅಧಿಸೂಚನೆ ಸಂಖ್ಯೆ ಎಫ್‌ಡಿ 02 ಎಸ್‌ಆರ್‌ಎ 2011 ದಿನಾಂಕ:02.02.2012ರಲ್ಲಿ 224–ಬಿ ನಿಯಮಕ್ಕೆ ಆಗಿರುವ ತಿದ್ದುಪಡಿಗಳೊಂದಿಗೆ ಓದಿಕೊಂಡಂತೆ ಸರ್ಕಾರ/ ನೇಮಕಾತಿ ಪ್ರಾಧಿಕಾರ/ ಇಲಾಖಾ ಮುಖ್ಯಸ್ಥರ ಪೂರ್ವಾನುಮತಿಯನ್ನು ಪಡೆಯಬೇಕು.

5) ಸುತ್ತೋಲೆ ಕ್ರಮಾಂಕ ಆಇ 257 ಸೇ–3/12 ದಿನಾಂಕ:30.05.2012ರ 3ನೇ ಕಂಡಿಕೆಯಲ್ಲಿಯ ಇತರೆ ಸೂಚನೆಗಳನ್ನು ಗಮನಿಸುವುದು.

6) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಆಇ 04 ಎಸ್‌ಆರ್‌ಎ 2010 ದಿನಾಂಕ 04.07.2012.

* ಮೂಲತ: ಮುನ್ಸಿಪಾಲಿಟಿಗಳಲ್ಲಿ ನೇಮಕವಾಗಿ, ಮುನ್ಸಿಪಾಲಿಟಿಗಳು ನಂತರದಲ್ಲಿ ಮಂಡಲ ಪಂಚಾಯಿತಿಗಳಾಗಿ, ಮಂಡಲ್ ಪಂಚಾಯಿತಿಗಳು ಗ್ರಾಮ ಪಂಚಾಯಿತಿಯಾಗಿ ಪರಿವರ್ತನೆಯಾಗಿರುವ ಸಂದರ್ಭದಲ್ಲಿ, ನೌಕರರು ಮುನ್ಸಿಪಾಲಿಟಿಯಲ್ಲಿ (1972ರ ಕರ್ನಾಟಕ ಮುನ್ಸಿಪಾಲಿಟಿಗಳ ನಿಯಮಾವಳಿಗಳು ಮತ್ತು 1987ರ ಕರ್ನಾಟಕ ಮುನ್ಸಿಪಾಲಿಟಿಗಳ ನಿಯಮಾವಳಿಗಳಲ್ಲಿನ ಸೇವಾ ಷರತ್ತುಗಳ ಪ್ರಕಾರ) ಮತ್ತು ಮಂಡಲ್ ಮಂಚಾಯಿತಿಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಆದೇಶ ಸಂಖ್ಯೆ:ಆರ್‌ಡಿಪಿ 205 ಇಪಿಟಿ 89, ದಿನಾಂಕ:9.9.1992ರ ಪ್ರಕಾರ ಅರ್ಹ ಸೇವೆ ಎಂದು ಪರಿಗಣಿಸಬಹುದಾಗಿದೆ ಮತ್ತು ಅಂತಿಮವಾಗಿ ಗ್ರಾಮ ಪಂಚಾಯಿತಿಯಿಂದ ನಿವೃತ್ತಿ ಹೊಂದಿರುವ ನೌಕರರಿಗೆ ಗ್ರಾಮ ಪಂಚಾಯಿತಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಗ್ರಾ.ಅ.ಪ 63 ಗ್ರಾಪಂಕ 2006, ದಿನಾಂಕ:27.02.2006ರ ಮಾರ್ಗಸೂಚಿಗಳನ್ನನುಸರಿಸಿ ಕೆ.ಸಿಎಸ್.ಆರ್.ನಿಯಮ 235ರಡಿ ನಿವೃತ್ತಿ ಸೌಲಭ್ಯಗಳಿಗೆ ಅರ್ಹತಾ ಸೇವೆಯೆಂದು ಪರಿಗಣಿಸಬಹುದಾಗಿದೆ. ಈ ಬಗ್ಗೆ ಸರ್ಕಾರವು ಪತ್ರ ಸಂಖ್ಯೆ: ಗ್ರಾ.ಅ.ಪ 47 ಗ್ರಾಪಂಕ 2012, ದಿನಾಂಕ:15.07.2013ರಲ್ಲಿ ಸ್ಪಷ್ಟನೆ ನೀಡಿದೆ.

* ಉಳಿದಂತೆ, ಮುನ್ಸಿಪಾಲಿಟಿಗಳಲ್ಲಿ ನೇಮಕವಾಗುವ ಮೊದಲು ಕೆ.ಸಿ.ಎಸ್.ಆರ್. ನಿಯಮ 224 ಬಿ ನಿಯಮದಲ್ಲಿ ಉಲ್ಲೇಖಿಸಿರುವ 219ಎ, 224ಎ, 235, 235ಎ, 235ಬಿ, 247, 247ಎ, 248ಎ, 248ಎಎ, 252(ಬಿ), 416 ಮತ್ತು 417 ನಿಯಮಗಳ ಪ್ರಕಾರ ಹಿಂದಿನ ಸೇವೆಯನ್ನು ಪಿಂಚಣಿಗೆ ಪರಿಗಣಿಸಲು ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

*** ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿದಾಗ ಪರಿಗಣಿಸಬೇಕಾದ ಅಂಶಗಳು**

1959ರ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ 1993ರ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ರಚನೆಯಾಗಿರುವ ಗ್ರಾಮ ಪಂಚಾಯಿತಿಯು ಮುನ್ಸಿಪಾಲಿಟಿಯಾಗಿ ಪರಿವರ್ತನೆಯಾದಾಗ ಪರಿವರ್ತನೆ ನಂತರ ಗ್ರಾಮ ಪಂಚಾಯಿತಿ ನೌಕರರು ಪಡೆಯಬಹುದಾದ ವೇತನ ಭತ್ಯೆಗಳು ಮತ್ತು ಸೇವಾ ಷರತ್ತುಗಳ ಬಗ್ಗೆ 1964ರ ಮುನ್ಸಿಪಲ್ ಅಧಿನಿಯಮದ 357(ಜಿ) ಕಲಂನ ಪ್ರಕಾರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಅಧಿಸೂಚನೆ ಹೊರಡಿಸಬೇಕಾಗುತ್ತದೆ. ಈ ರೀತಿ ಅಧಿಸೂಚನೆ ಹೊರಡಿಸಿದಲ್ಲಿ ಮಾತ್ರ ಗ್ರಾಮ ಪಂಚಾಯಿತಿ ನೌಕರರಿಗೆ ವೇತನ ಶ್ರೇಣಿಗಳನ್ನು ಮತ್ತು ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಬಹುದಾಗಿದೆ.

*** ಮುನ್ಸಿಪಾಲಿಟಿಯು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾದಾಗ ಪರಿಗಣಿಸಬೇಕಾದ ಅಂಶಗಳು**

ಮುನ್ಸಿಪಾಲಿಟಿಯು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾದಾಗ ಮುನ್ಸಿಪಲ್ ನೌಕರರು ಪಂಚಾಯಿತಿ ನೌಕರರೆಂದು ಪರಿಗಣಿಸಲ್ಪಟ್ಟರೂ ಸಹ ಪಂಚಾಯಿತಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಆದೇಶ ಸಂಖ್ಯೆ:ಹೆಚ್.ಯು.ಡಿ 706 ಎಂಎಲ್‌ಆರ್ 82, ದಿ:28.05.1984ರ ಪ್ರಕಾರ ಅರ್ಹ ಸೇವೆ ಎಂದು ಪರಿಗಣಿಸಬಹುದಾಗಿದೆ.

*** ಮುನ್ಸಿಪಾಲಿಟಿಯು ಮಂಡಲ್ ಪಂಚಾಯಿತಿಯಾಗಿ ನಂತರದಲ್ಲಿ ಗ್ರಾಮ ಪಂಚಾಯಿತಿಯಾಗಿ ಪರಿವರ್ತನೆಯಾದಾಗ ಗಮನಿಸಬೇಕಾದ ಅಂಶಗಳು**

ಮುನ್ಸಿಪಾಲಿಟಿಯು 1983ರ ಕರ್ನಾಟಕ ಜಿಲ್ಲಾ ಪರಿಷತ್ ಅಧಿನಿಯಮದ 128(ಜಿ) ಕಲಂನ ಪ್ರಕಾರ ಮಂಡಲ್ ಪಂಚಾಯಿತಿಯಾಗಿ ಪರಿವರ್ತನೆಯಾದಾಗ ಮುನ್ಸಿಪಲ್ ನೌಕರರು ಮಂಡಲ್ ಪಂಚಾಯಿತಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ.ಪಿ 205 ಇಪಿಟಿ 89, ದಿನಾಂಕ:09.09.1992ರ ಪ್ರಕಾರ, ಅರ್ಹತಾ ಸೇವೆ ಎಂದು ಪರಿಗಣಿಸಬಹುದು. ಮಂಡಲ್ ಪಂಚಾಯಿತಿಯು 1993ರ ಪಂಚಾಯತ್‌ರಾಜ್ ಅಧಿನಿಯಮದ ಪ್ರಕಾರ ಗ್ರಾಮ ಪಂಚಾಯಿತಿಯಾಗಿ ಪರಿವರ್ತನೆಯಾದಾಗ ಪರಿವರ್ತಿತ ಮಂಡಲ್ ಪಂಚಾಯತ್ ನೌಕರರು ಗ್ರಾಮ ಪಂಚಾಯಿತಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಅರ್ಹತಾ ಸೇವೆ ಎಂದು ಪರಿಗಣಿಸಬಹುದಾಗಿದೆ. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 63 ಗ್ರಾಪಂಕಾ 2006, ದಿನಾಂಕ:27.02.2006ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ ಕೆ.ಸಿ.ಎಸ್.ಆರ್. ನಿಯಮ 235ರಡಿಯ ನಿಬಂಧನೆಗಳಿಗೆ ಒಳಪಟ್ಟಿದೆ.

*** ಮುನ್ಸಿಪಾಲಿಟಿಯು ನಗರ ಪಾಲಿಕೆಯಾಗಿ ಪರಿವರ್ತನೆಯಾದಾಗ ಗಮನಿಸಬೇಕಾದ ಅಂಶಗಳು**

ಮುನ್ಸಿಪಾಲಿಟಿಯು ನಗರ ಪಾಲಿಕೆಯಾಗಿ ಪರಿವರ್ತನೆಯಾದಾಗ 1976ರ ನಗರ ಪಾಲಿಕೆ ಅಧಿನಿಯಮದ 503ನೇ ಕಲಂನ ಪ್ರಕಾರ ಅಧಿಸೂಚನೆಯನ್ನು ಹೊರಡಿಸಬೇಕಾಗುತ್ತದೆ. ಮುನ್ಸಿಪಲ್ ನೌಕರರಂತೆಯೇ ನಗರ ಪಾಲಿಕೆ ನೌಕರರೂ ಸಹ ರಾಜ್ಯ ಸಂಚಿತ ನಿಧಿಯಿಂದ ಪಿಂಚಣಿ ಪಡೆಯುತ್ತಿರುವ ಪ್ರಯುಕ್ತ, ಮುನ್ಸಿಪಾಲಿಟಿಯು ನಗರ ಪಾಲಿಕೆಯಾಗಿ ಪರಿವರ್ತನೆಯಾದರೂ ಸಹ 503ನೇ ಕಲಂನ ಪ್ರಕಾರ, ಅಧಿಸೂಚನೆ ಹೊರಡಿಸುವಿಕೆಯನ್ನು ಮುನ್ಸಿಪಲ್ ನೌಕರರು ನಗರ ಪಾಲಿಕೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಉದ್ದೇಶಕ್ಕಾಗಿ ಅರ್ಹ ಸೇವೆ ಎಂದು ಪರಿಗಣಿಸಬಹುದು.

ಪಿಂಚಣಿ ಪ್ರಾಧೀಕರಿಸುವ ಮುನ್ನ ಪಿಂಚಣಿ ನಿಗಧಿಪಡಿಸಲು ಅನುಸರಿಸಬೇಕಾದ ಅಂಶಗಳು

1) **ವೇತನ ಭತ್ಯೆಗಳು**

ಮುನ್ಸಿಪಲ್ ನೌಕರರು ತಮ್ಮ ಪಿಂಚಣಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಬಗ್ಗೆ ಕೆ.ಸಿ.ಎಸ್.ಆರ್.ನಿಯಮ 333ರಲ್ಲಿ ವಿವರಿಸಲಾಗಿದೆ. ಕಚೇರಿ ಮುಖ್ಯಸ್ಥರು ಪಿಂಚಣಿ ಕಡತದಲ್ಲಿ ಪರಿಶೀಲಿಸಬೇಕಾದ ಅಂಶಗಳ ಬಗ್ಗೆ ಆರ್ಥಿಕ ಇಲಾಖೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆಇ(ವಿ)5 ಸಂತಪ್ರ 88, ದಿನಾಂಕ:15.4.1988ರಲ್ಲಿ ತಿಳಿಸಲಾಗಿದೆ.

2) ಸ್ಥಗಿತ ವೇತನ ಭತ್ಯೆ ಮಂಜೂರಾತಿ

1) ಮುನ್ಸಿಪಲ್ ನೌಕರರಿಗೆ 5 ಸ್ಥಗಿತ ವೇತನಗಳನ್ನು ಮಂಜೂರು ಮಾಡುವ ವಿಧಾನವನ್ನು ದಿನಾಂಕ:10.10.2002ರಿಂದ ಜಾರಿಗೊಳಿಸಲಾಗಿದೆ ಹಾಗೂ 01.04.2012 ರಿಂದ 8 ಸ್ಥಗಿತ ವೇತನಗಳನ್ನು ಮಂಜೂರು ಮಾಡುವ ವಿಧಾನವನ್ನು ಜಾರಿಗೊಳಿಸಲಾಗಿದೆ.

2) ನಗರಪಾಲಿಕೆ ನೌಕರರ ಪ್ರಕರಣಗಳಲ್ಲಿ 3 ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ವಿಧಾನವನ್ನು ದಿನಾಂಕ:01.12.1987 ರಿಂದಲೂ 5 ಸ್ಥಗಿತ ವೇತನ ಬಡ್ತಿಗಳನ್ನು ದಿನಾಂಕ:29.11.2001 ರಿಂದಲೂ ಜಾರಿಗೆ ನೀಡಲಾಗಿದೆ.

3) ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿರುವ ಬಗ್ಗೆ ಹೆಚ್ಚುವರಿ ವೇತನ ಬಡ್ತಿಗಳ ಮಂಜೂರಾತಿ

ಮುನ್ಸಿಪಲ್ ನೌಕರರಿಗೆ 1974ರ ಕರ್ನಾಟಕ ನಾಗರೀಕ ಸೇವಾ(ಸೇವೆ ಮತ್ತು ಕನ್ನಡ ಭಾಷೆ ಪರೀಕ್ಷೆ) ನಿಯಮಗಳನ್ನು ವಿಸ್ತರಿಸಿಲ್ಲವಾದ್ದರಿಂದ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ. ಮುನ್ಸಿಪಲ್ ನೌಕರರ ನೇಮಕಾತಿ, ಬಡ್ತಿಗೆ ಸಂಬಂಧಿಸಿದಂತೆ 1971ರ ಕರ್ನಾಟಕ ಮುನ್ಸಿಪಾಲಿಟಿಗಳ ನಿಯಮಗಳು ದಿನಾಂಕ:02.09.1971ರಿಂದಲೂ ಜಾರಿಯಲ್ಲಿದ್ದು, ಈ ನಿಯಮಗಳ ಪ್ರಕಾರ ನೌಕರರು ಕಡ್ಡಾಯವಾಗಿ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಇಲಾಖಾ ಪರೀಕ್ಷೆಯಲ್ಲಿ ಪಾಸು ಮಾಡಿದ್ದಕ್ಕಾಗಿ, ಹೆಚ್ಚುವರಿ ಬಡ್ತಿ ಮಂಜೂರು ಮಾಡಲು 1971ರ ನಿಯಮಗಳಲ್ಲಿ ಅವಕಾಶವಿರುವುದಿಲ್ಲ, ಮಂಜೂರು ಮಾಡಿದ್ದಲ್ಲಿ ವಸೂಲು ಮಾಡಲು ನಗರಾಭಿವೃದ್ಧಿ ಇಲಾಖೆಯು ದಿನಾಂಕ:20.07.1982ರ ಸುತ್ತೋಲೆಯಲ್ಲಿ ಸೂಚನೆ ನೀಡಿರುತ್ತದೆ.

4) ಕಾಲಮಿತ ವೇತನ ಬಡ್ತಿಯನ್ನು (Non SSLC) ಮುನ್ಸಿಪಲ್ ನೌಕರರಿಗೆ ಮಂಜೂರು ಮಾಡುವ ಬಗ್ಗೆ:–

Non SSLC ಮುನ್ಸಿಪಲ್ ನೌಕರರಿಗೆ (ದ್ವಿತೀಯ ದರ್ಜೆ ಮತ್ತು ಸಮಾನ ವೇತನ ಶ್ರೇಣಿಯಲ್ಲಿ ಕೆಲಸ ಮಾಡುತ್ತಿರುವವರು) ಮಂಜೂರಾಗಿರುವ ಕಾಲಮಿತಿ ವೇತನ ಬಡ್ತಿ (TBA) ಸೌಲಭ್ಯವನ್ನು ತಾತ್ಕಾಲಿಕವಾಗಿ ಕಡೆಗಣಿಸಿ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡುವುದು ಮತ್ತು ಸದರಿ ಸೌಲಭ್ಯವನ್ನು ಪರಿಗಣಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಪೌರಾಡಳಿತ ಇಲಾಖೆಯಿಂದ ಪ್ರತಿಯೊಂದು ಪ್ರಕರಣದಲ್ಲಿಯೂ ಆದೇಶವನ್ನು ಪಡೆದುಕೊಂಡು ಸಲ್ಲಿಸುವಂತೆ ಸಂಬಂಧಪಟ್ಟ ಸಂಸ್ಥೆಯವರಿಗೆ ತಿಳಿಸಲು ಕ್ರಮಕೈಗೊಳ್ಳುವುದು.

5) **ಸ್ವಯಂಚಾಲಿತ ವೇತನ ಬಡ್ತಿ**(Automatic Promotion)

ಸ್ವಯಂಚಾಲಿತ ವೇತನ ಬಡ್ತಿ ಸೌಲಭ್ಯವನ್ನು ಕಾಲಮಿತ ವೇತನ ಬಡ್ತಿಗಿಂತ ಹೆಚ್ಚುವರಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಿರುವ ಪ್ರಕರಣಗಳಲ್ಲಿ 1971ರ ಕರ್ನಾಟಕ ಮುನ್ಸಿಪಾಲಿಟಿಗಳ ನಿಯಮಗಳ ಪ್ರಕಾರ ಬಡ್ತಿ ಹುದ್ದೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವುದು. ಬಡ್ತಿ ಹುದ್ದೆ ಇಲ್ಲದಿದ್ದಲ್ಲಿ ಸರ್ಕಾರದ ಆರ್ಥಿಕ ಇಲಾಖೆಯವರು ದಿನಾಂಕ:08.02.1993ರ ಪತ್ರದಲ್ಲಿ ಮಹಾಲೇಖಾಪಾಲರಿಗೆ ನೀಡಿರುವ ಸ್ಪಷ್ಟೀಕರಣದಂತೆ ಹೆಚ್ಚುವರಿ ವೇತನ ಬಡ್ತಿ (Additional Increment) ಸೌಲಭ್ಯವನ್ನು ಕಾಲಮಿತಿ ವೇತನ ಬಡ್ತಿ ಶ್ರೇಣಿಯ ಸೌಲಭ್ಯಕ್ಕೆ ಸೀಮಿತಗೊಳಿಸುವುದು. ಸ್ವಯಂಚಾಲಿತ ವೇತನ ರೂಪದಲ್ಲಿ ನೀಡಲಾಗುವ ಹೆಚ್ಚುವರಿ ವೇತನ ಬಡ್ತಿಯು ಬಡ್ತಿ ಹುದ್ದೆಗೆ (Promotional Post) ಸಮಾನವಾಗಿರಬಹುದು.

6) **ಸತತವಾಗಿ 20 ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ 1 ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿರುವುದು**

ಸೇವಾವಧಿಯಲ್ಲಿ ಯಾವುದೇ ಮುಂಬಡ್ತಿ ಸೌಲಭ್ಯವನ್ನು ಪಡೆಯದಿರುವ ನೌಕರರಿಗೆ ಮಾತ್ರ ಈ ಆದೇಶವನ್ನು ಸೀಮಿತಗೊಳಿಸುವುದು.

7) ವಾರ್ಷಿಕ ವೇತನ ಬಡ್ತಿ ದಿನಾಂಕಗಳನ್ನು ನಿರ್ಧರಿಸುವಲ್ಲಿ ದೋಷ ಕಂಡುಬರುತ್ತಿರುವ ಬಗ್ಗೆ.

ನೌಕರನು ಅಮಾನತ್ತಿನ ಶಿಕ್ಷೆಗೆ ಒಳಗಾಗಿದ್ದು, ಅಮಾನತ್ತಿನ ಅವಧಿಯನ್ನು ನಿವೃತ್ತಿ / ನಿಧನರಾಗುವವರೆಗೆ ಸಕ್ರಮಗೊಳಿಸದಿರುವುದು ಅಥವಾ ಅಮಾನತ್ತಿನ ಅವಧಿಯನ್ನು ಅಮಾನತ್ತು / ವೇತನ ರಹಿತ ರಜೆ ಎಂದು ಪರಿಗಣಿಸಿದ ಸಂದರ್ಭಗಳಲ್ಲಿ ಅಥವಾ ಗೈರು ಹಾಜರಿ ಅವಧಿಯು 30 ದಿನ ಅಥವಾ ಅದಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ನೌಕರನಿಗೆ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಮುಂದೂಡುವ ಮೂಲಕ ಸಕ್ರಮಗೊಳಿಸಬೇಕಾಗುತ್ತದೆ (ಆದೇಶ ಸಂಖ್ಯೆ ಎಫ್‌ಡಿ 119 ಎಸ್.ಆರ್.ಎಸ್.74, ದಿನಾಂಕ:23.10.1974, ಕೆ.ಸಿ.ಎಸ್.ಆರ್.ನಿಯಮ 51).

8) ಪದವಿಯನ್ನು ಪಡೆದಿರುವ ಕಾರಣಕ್ಕಾಗಿ ಲಭ್ಯವಾಗುವ ಹೆಚ್ಚುವರಿ ವೇತನಗಳ ಬಗ್ಗೆ:–

ಪದವಿ ಪರೀಕ್ಷೆ ಪಾಸು ಮಾಡಿದ ನೌಕರರಿಗೆ ಉತ್ತೇಜನ ರೂಪದಲ್ಲಿ ಮಂಜೂರು ಮಾಡಲಾಗಿದ್ದ ಮುಂಗಡ ಬಡ್ತಿ ಸೌಲಭ್ಯವನ್ನು ನಗರಾಭಿವೃದ್ಧಿ ಇಲಾಖೆಯ ಆದೇಶ ದಿನಾಂಕ:29.11.1976ರಲ್ಲಿ ಮುನ್ಸಿಪಲ್ ನೌಕರರಿಗೂ ವಿಸ್ತರಿಸಲಾಗಿದ್ದು, ಸದರಿ ಆದೇಶವನ್ನು ದಿನಾಂಕ:25.04.1981ರಲ್ಲಿ 1.1.1977ರಿಂದ ಪೂರ್ವಾನ್ವಯವಾಗುವಂತೆ, ಸರ್ಕಾರಿ ನೌಕರರಿಗೂ ಸೇರಿ ನಿಲ್ಲಿಸಲಾಗಿರುತ್ತದೆ. ಸರ್ಕಾರಿ ನೌಕರರು ಸೇರಿ ಮುನ್ಸಿಪಲ್ ನೌಕರರು ದಿನಾಂಕ:31.12.1976ಕ್ಕೆ ಮೊದಲು ಪದವಿಯನ್ನು ಪಡೆದಿದ್ದಲ್ಲಿ ಮಾತ್ರ ಹೆಚ್ಚುವರಿ ವೇತನ ಬಡ್ತಿ ಲಭ್ಯವಾಗುತ್ತದೆ. ದಿನಾಂಕ:01.01.1977 ಮತ್ತು ನಂತರದಲ್ಲಿ ಪದವಿಯನ್ನು ಪಡೆದಿರುವ ಮುನ್ಸಿಪಲ್ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ, ಅವುಗಳನ್ನು ಕಡೆಗಣಿಸಿ ವೇತನವನ್ನು ಪುನರ್ ನಿಗಧಿ ಮಾಡುವ ಮೂಲಕ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಬಹುದು. ಅಂತಹ ಸಂದರ್ಭಗಳಲ್ಲಿ ವೇತನವನ್ನು ಪುನರ್ ನಿಗಧಿಗೊಳಿಸಿ ಹೆಚ್ಚುವರಿ ವೇತನ ಭತ್ಯೆಗಳನ್ನು ವಸೂಲು ಮಾಡಲು ಸಂಬಂಧಪಟ್ಟ ಸಂಸ್ಥೆಯವರಿಗೆ ತಿಳಿಸಬಹುದು(ಆದೇಶ ಸಂಖ್ಯೆ:ಹೆಚ್‌ಯುಡಿ 869/ಎಂಎಆರ್/78 ದಿನಾಂಕ:25.04.1989).

9) ಸ್ವಇಚ್ಛಾ ನಿವೃತ್ತಿ ಪ್ರಕರಣಗಳಲ್ಲಿ ಅರ್ಹ ಸೇವೆಯ ಪ್ರಮಾಣವನ್ನು ಮುಂಚಿತವಾಗಿ ಪರಿಶೀಲಿಸದಿರುವ ಬಗ್ಗೆ:–

15 ವರ್ಷ ಸೇವೆ ಸಲ್ಲಿಸಿ ಸ್ವ ಇಚ್ಛೆ ಮೇಲೆ ನಿವೃತ್ತಿಯನ್ನು ಪಡೆಯಲು ಉದ್ದೇಶಿಸಿರುವ ನೌಕರರ ಸೇವಾ ಪುಸ್ತಕಗಳನ್ನು ಕೆ.ಸಿ.ಎಸ್.ಆರ್.ನಿಯಮ 285(2) (iii)ನೇ ನಿಯಮದ ಪ್ರಕಾರ ಪರಿಶೀಲಿಸಬೇಕಾಗಿದೆ.

10) ಸೇವೆಯಲ್ಲಿದ್ದಂತೆ ನಿಧನರಾಗಿರುವ ನೌಕರರ ಪ್ರಕರಣಗಳಲ್ಲಿ ಪರಿಶೀಲಿಸಬೇಕಾದ ದಾಖಲೆಗಳು:–

1964 ಮತ್ತು 2002ರ ಕುಟುಂಬ ಪಿಂಚಣಿ ನಿಯಮಾವಳಿಗಳು (2002ರ ನಿಯಮಾವಳಿಗಳು ದಿನಾಂಕ:01.04.1998 ರಿಂದ ಜಾರಿಗೆ ಬಂದಿರುತ್ತದೆ) 13 ಮತ್ತು 11ನೇ ನಿಯಮಗಳಲ್ಲಿ ತಿಳಿಸಿರುಂತೆ ನಮೂನೆ 'ಸಿ' ಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳುವುದು. ಅಪ್ರಾಪ್ತ ವಯಸ್ಕರ ಪ್ರಕರಣಗಳಲ್ಲಿ ವಯಸ್ಸನ್ನು ನಿರ್ಧರಿಸಲು ಶಾಲಾ ಪ್ರಮಾಣ ಪತ್ರ ಅಥವಾ ಸ್ಥಳೀಯ ಸಂಸ್ಥೆಯವರು ನೀಡಿರುವ ಜನ್ಮ ದಿನಾಂಕ ಪ್ರಮಾಣ ಪತ್ರವನ್ನು ಅಧಿಕೃತ ದಾಖಲೆಗಳಾಗಿ ಕಡ್ಡಾಯವಾಗಿ ಪಡೆದುಕೊಳ್ಳುವುದರ ಜೊತೆಗೆ, 345ಬಿ ನಿಯಮದಲ್ಲಿನ ಸೂಚನೆಗಳನ್ನು ಪಾಲಿಸುವುದು. ಇಬ್ಬರು ಪತ್ನಿಯರಿಗೆ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವುದು. ಮುನ್ಸಿಪಲ್ ನೌಕರರನ್ನು 2ನೇ ಮದುವೆ

ಮಾಡಿಕೊಳ್ಳುವ ಮೊದಲು ಅನುಮತಿ ಪಡೆದಿರುವ ಬಗ್ಗೆ ಸೇವಾ ಪುಸ್ತಕದಲ್ಲಿ ದಾಖಲಿಸುವಂತೆ ಸಂಬಂಧಪಟ್ಟ ಸಂಸ್ಥೆಯವರಿಗೆ ತಿಳಿಸಬೇಕು. ಮೇಲಿನ ನಿಯಮದಂತೆ ಅನುಮತಿ ಪಡೆದಿದ್ದಲ್ಲಿ ಕುಟುಂಬ ಪಿಂಚಣಿ ನಿಯಮಗಳಲ್ಲಿನ ಅವಕಾಶದಂತೆ ಕ್ರಮ ವಹಿಸಬೇಕು (ಸುತ್ತೋಲೆ ಸಂಖ್ಯೆ:ಆಇ 2 ಸನಿತಿ 97, ದಿನಾಂಕ:09.05.2000 ಮತ್ತು ನಿಯಮ 9(v)(3)(ಇ)).

11) ಪಿಂಚಣಿ ಪ್ರಾಧಿಕಾರಕ್ಕೆ ಒಳಪಡದ ನೌಕರರು:–

1) ಕರ್ನಾಟಕ ಮುನ್ಸಿಪಲ್ ಆಡಳಿತ ಸೇವೆ (ಕೆ.ಎಂ.ಎಸ್.) ವ್ಯಾಪ್ತಿಗೆ ಬರುವ ನೌಕರರು

2) 2004ರ ಕರ್ನಾಟಕ ಮುನ್ಸಿಪಾಲಿಟಿಗಳ (Recruitment of officers and employees) ನಿಯಮಾವಳಿಗಳ 8ನೇ ನಿಯಮದ ಪ್ರಕಾರ ದಿನಾಂಕ:08.07.2004ರ ನಂತರ ನೇಮಕವಾಗಿರುವ ಮತ್ತು ದಿನಗೂಲಿಯಿಂದ ಸಕ್ರಮಗೊಂಡಿರುವ ನೌಕರರು.

3) 2010ರ ಕರ್ನಾಟಕ ಮುನ್ಸಿಪಾಲಿಟಿಗಳ (Recruitment of officers and employees) ನಿಯಮಾವಳಿಗಳ 8ನೇ ನಿಯಮದ ಪ್ರಕಾರ ದಿನಾಂಕ:01.04.2006 ಮತ್ತು ನಂತರದಲ್ಲಿ ನೇಮಕವಾಗಿರುವ ಮುನ್ಸಿಪಲ್ ನೌಕರರಿಗೆ ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ (ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ) ನಿಯಮಗಳು 2011ರ ನಿಯಮ 8ರಂತೆ ದಿನಾಂಕ:01.04.2006 ಮತ್ತು ನಂತರದಲ್ಲಿ ನೇಮಕವಾಗಿರುವ ಮಹಾನಗರ ಪಾಲಿಕೆಗಳ ನೌಕರರಿಗೆ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಯಮಗಳು ಅನ್ವಯವಾಗುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ನಅಇ 69 ಬಿ.ಎಂ.ಎಸ್. 2011, ದಿನಾಂಕ:10.1.2011ರನ್ವಯ ಸದರಿ ನೌಕರರು

ನೂತನ ಪಿಂಚಣಿ ಯೋಜನೆಗೆ ಒಳಪಡುತ್ತಾರೆ. ಈ ಸಂಬಂಧದಲ್ಲಿ ಪೌರಾಡಳಿತ ನಿರ್ದೇಶನಾಲಯವನ್ನು ಈ ಯೋಜನೆಯ ಮೇಲುಸ್ತುವಾರಿ ವಹಿಸಿ ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸಲು ಆದೇಶಿಸಿದೆ.

12) **ಮುನ್ಸಿಪಲ್ ನೌಕರರ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳ ಇತ್ಯರ್ಥಕ್ಕೆ ಜಿಲ್ಲಾಮಟ್ಟದ ಕಚೇರಿಗಳಲ್ಲಿ ಅನುಸರಿಸಬೇಕಾದ ಕ್ರಮದ ಕುರಿತು ಸಂಕ್ಷಿಪ್ತ ವಿವರಣೆ:–**

ನಗರ ಸ್ಥಳೀಯ ಸಂಸ್ಥೆಗಳಾದ ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ / ನಿಧನರಾದ ಮುನ್ಸಿಪಲ್ ನೌಕರರ ಪಿಂಚಣಿ / ಕುಟುಂಬ ಪಿಂಚಣಿ ಸೌಲಭ್ಯಗಳನ್ನು 1971ರ ಕರ್ನಾಟಕ ಮುನ್ಸಿಪಾಲಿಟಿಗಳ (ಆರ್.ಒ.ಎಸ್.) ನಿಯಮಗಳು 1972ರ ಕರ್ನಾಟಕ ಮುನ್ಸಿಪಾಲಿಟಿಗಳ (ಸಿ.ಎಸ್.ಒ.ಎಸ್.) ನಿಯಮಗಳು, 1987ರ ಕರ್ನಾಟಕ ಮುನ್ಸಿಪಾಲಿಟಿಗಳ (ಸಿ.ಎಸ್.ಒ.ಎಸ್.) ನಿಯಮಗಳು, 2004ರ ಕರ್ನಾಟಕ ಮುನ್ಸಿಪಾಲಿಟಿಗಳ (ಆರ್.ಒ.ಎ) ನಿಯಮಗಳು ಮತ್ತು 2010ರ ಕರ್ನಾಟಕ ಮುನ್ಸಿಪಾಲಿಟಿಗಳ (ಆರ್.ಒ.ಇ.) ನಿಯಮಗಳು ಹಾಗೂ 2011ರ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ ನಿಯಮಗಳು ಇವುಗಳಲ್ಲಿನ ನಿರ್ದೇಶನಗಳಂತೆ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆಯ ಜಿಲ್ಲಾ ಕಚೇರಿಗಳ ಸಹಾಯಕ ನಿರ್ದೇಶಕರುಗಳ ಕಚೇರಿಗಳಲ್ಲಿ ಪಿಂಚಣಿ ಇತ್ಯರ್ಥಪಡಿಸಲಾಗುತ್ತದೆ. ಪಿಂಚಣಿ ಇತ್ಯರ್ಥಪಡಿಸಲು ಕೆಳಕಂಡ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

1) ಮುನ್ಸಿಪಲ್ ನೌಕರರ ಪಿಂಚಣಿ/ಕುಟುಂಬ ಪಿಂಚಣಿ ಪ್ರಸ್ತಾವನೆಗಳನ್ನು ನಿವೃತ್ತ ನೌಕರರಿಂದ / ಮೃತ ನೌಕರರ ಕಾನೂನುಬದ್ಧ ವಾರಸುದಾರರಿಂದ ಪಡೆದ ಅಗತ್ಯ ಮಾಹಿತಿಗಳನ್ನು ಆಧರಿಸಿ ಆಯಾ ಮುನ್ಸಿಪಾಲಿಟಿಗಳ ಮುಖ್ಯಸ್ಥರು ಪಿಂಚಣಿಗಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 321 ಮತ್ತು 333ರಲ್ಲಿ ತಿಳಿಸಿರುವಂತೆ, ಹಾಗೂ ಕುಟುಂಬ ಪಿಂಚಣಿಗಾಗಿ 2002ರ ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ವೇತನ) ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಗಳಲ್ಲಿ ಹಾಗೂ ಈ ನಿಯಮಗಳಲ್ಲಿ ತಿಳಿಸಿರುವ ಲಗತ್ತುಗಳೊಡನೆ ಪೂರ್ಣವಾಗಿ ನಮೂನೆಗಳನ್ನು ಭರ್ತಿ ಮಾಡಿ ಪಿಂಚಣಿ ಪ್ರಾಧೀಕರಣಕ್ಕಾಗಿ ಸಂಬಂಧಪಟ್ಟ ಜಿಲ್ಲಾವಾರು ಸಹಾಯಕ ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆ ಇವರಿಗೆ ಸಲ್ಲಿಸಬೇಕು.

2) ಸ್ಥಳೀಯ ಸಂಸ್ಥೆಗಳಿಂದ ಸ್ವೀಕೃತವಾದ ಪಿಂಚಣಿ / ಕುಟುಂಬ ಪಿಂಚಣಿ ಪ್ರಸ್ತಾವನೆಗಳಲ್ಲಿ ಪಿಂಚಣಿ ಪ್ರಾಧೀಕರಣಕ್ಕೆ ಮೇಲೆ ತಿಳಿಸಿದ ನಿಯಮಗಳಲ್ಲಿ ತಿಳಿಸಲಾಗಿರುವ ಅಗತ್ಯ ದಾಖಲೆಗಳನ್ನು / ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸಿರುವ ಬಗ್ಗೆ ಪರಿಶೀಲಿಸಬೇಕು.

3) ಸೇವಾ ಪುಸ್ತಕ, ಅಂತಿಮ ವೇತನ ಪ್ರಮಾಣ ಪತ್ರ, ಬೇಬಾಕಿ ಪತ್ರ, ಇಲಾಖೆ / ನ್ಯಾಯಾಲಯ ವಿಚಾರಣೆಗಳು ಬಾಕಿ ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ ಹಾಗೂ ಕುಟುಂಬ ಪಿಂಚಣಿ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ (1) ಮರಣ ಪ್ರಮಾಣ ಪತ್ರ (2) ತಹಸೀಲ್ದಾರರಿಂದ ಪಡೆದ ಕುಟುಂಬ ಜೀವಂತ ಸದಸ್ಯರ ಪ್ರಮಾಣ ಪತ್ರ, ಕುಟುಂಬ ಪಿಂಚಣಿದಾರರು ಅಪ್ರಾಪ್ತರಾಗಿದ್ದಲ್ಲಿ ಜಿಲ್ಲಾಧಿಕಾರಿಗಳಿಂದ ಪಡೆದ ಪೋಷಕ ಪ್ರಮಾಣ ಪತ್ರ, ಕೆ.ಸಿ.ಎಸ್.ಆರ್.ನಿಯಮ 302ರ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅವಲಂಬಿತರಿಲ್ಲದಿದ್ದಲ್ಲಿ ಮರಣ ಉಪದಾನಕ್ಕಾಗಿ ನ್ಯಾಯಾಲಯದಿಂದ ಪಡೆದ ವಾರಸುದಾರರ ಪ್ರಮಾಣ ಪತ್ರಗಳನ್ನು ಸಲ್ಲಿಸಿರಬೇಕು.

4) ಸೇವಾ ಪುಸ್ತಕಗಳಲ್ಲಿ ಕೆಳಕಂಡ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

   1) ನೇಮಕಾತಿ ಆದೇಶ ಮತ್ತು ದಿನಾಂಕ
   2) ಜನ್ಮ ದಿನಾಂಕ ದೃಢೀಕರಿಸಿರಬೇಕು.
   3) ಸೇವಾ ವಿಚ್ಛಿನ್ನತೆ ಇಲ್ಲದಿರುವ ಬಗ್ಗೆಪರಿಶೀಲಿಸಬೇಕು.
   4) ನೌಕರರಿಗೆ ನೀಡಿರುವ ವೇತನ ಶ್ರೇಣಿಗಳು ಮತ್ತು ವೇತನ ನಿಗಧಿಪಡಿಸಿರುವ ಬಗ್ಗೆ
   5) ಅಮಾನತ್ತು, ಇಲಾಖಾ ವಿಚಾರಣೆಗಳ ಬಗ್ಗೆ ದಾಖಲಿಸಿರುವ ಬಗ್ಗೆ.
   6) ಮುನಿಸಿಪಲ್ ನೌಕರರ ಪಿಂಚಣಿ / ಕುಟುಂಬ ಪಿಂಚಣಿ ಮತ್ತು ಪರಿವರ್ತಿತ ಪಿಂಚಣಿ

   ಮುಂತಾದ ಸೌಲಭ್ಯಗಳನ್ನು ಪ್ರಾಧೀಕರಿಸತಕ್ಕದ್ದು. ಮುನಿಸಿಪಲ್ ನೌಕರರ ನೇಮಕಾತಿ ನಿಯಮಗಳನ್ವಯ ಗಳಿಕೆ ರಜೆ ನಗಧೀಕರಣ ಜಿಲ್ಲಾಧಿಕಾರಿಗಳು ಮಾಡುತ್ತಿದ್ದು, ಈ ಸಂಬಂಧದ ಪರಿಶೀಲನೆ ಈ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ.

   7) ಸಲ್ಲಿಸಿರುವ ಸೇವೆ ಹಾಗೂ ಅಂತಿಮ ವೇತನವನ್ನು ಆಧರಿಸಿ ಪಿಂಚಣಿ / ಕುಟುಂಬ ಪಿಂಚಣಿ ಲೆಕ್ಕಾಚಾರ ಮಾಡಿರುವ ಬಗ್ಗೆ ಪರಿಶೀಲಿಸಬೇಕು.
   8) ಲೆಕ್ಕಾಚಾರ ಪಟ್ಟಿಯಲ್ಲಿ ನ್ಯೂನತೆಗಳಿಲ್ಲದಿರುವುದನ್ನು ಖಾತರಿಪಡಿಸಿಕೊಂಡು ನಮೂನೆ 43ರಲ್ಲಿ ಪಿಂಚಣಿ / ಕುಟುಂಬ ಪಿಂಚಣಿಯನ್ನು ಪ್ರಾಧೀಕರಿಸಬೇಕು ಹಾಗು ನಿವೃತ್ತಿ / ಮರಣ ಉಪದಾನ ಮತ್ತು ಪರಿವರ್ತಿತ ಪಿಂಚಣಿ ಮೊತ್ತಗಳನ್ನು ಪ್ರತ್ಯೇಕ

ನಮೂನೆಗಳಲ್ಲಿ ಪ್ರಾಧೀಕರಿಸಿ, ಪ್ರಾಧಿಕರಣ ಪತ್ರವನ್ನು ಮುಖಪತ್ರದೊಂದಿಗೆ ಸಂಬಂಧಿಸಿದ ಜಿಲ್ಲಾ ಖಜಾನೆ ಮೂಲಕ ಪಿಂಚಣಿದಾರರು / ಕುಟುಂಬ ಪಿಂಚಣಿದಾರರು ಯಾವ ಖಜಾನೆ ಮೂಲಕ ಪಿಂಚಣಿ ಸೌಲಭ್ಯಗಳನ್ನು ಪಡೆಯಲು ಇಚ್ಛಾ ಪತ್ರವನ್ನು ನೀಡಿರುವರು ಆ ಖಜಾನೆಗೆ ಪ್ರಾಧೀಕರಣ ನೀಡುವುದು. ಪ್ರಾಧೀಕರಣದ ಪ್ರತಿಗಳನ್ನು ಮಾಹಿತಿಗಾಗಿ ಕೆಳಕಂಡವರಿಗೆ ಕಳುಹಿಸತಕ್ಕದ್ದು.

1) ಸಂಬಂಧಪಟ್ಟ ಸ್ಥಳೀಯ ಸಂಸ್ಥೆ
2) ಮಹಾಲೇಖಪಾಲರು
3) ಪೌರಾಡಳಿತ ನಿರ್ದೇಶಕರು
4) ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ
5) ಜಿಲ್ಲಾಧಿಕಾರಿಗಳು, ಸಂಬಂಧಪಟ್ಟ ಜಿಲ್ಲೆ ಹಾಗೂ
6) ಸಂಬಂಧಿಸಿದ ಪಿಂಚಣಿ / ಕುಟುಂಬ ಪಿಂಚಣಿದಾರರಿಗೆ ಕಳುಹಿಸಬೇಕು ಮತ್ತು ಪ್ರಾಧೀಕರಣ ವಿವರಗಳನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿ ದೃಢೀಕರಿಸಬೇಕು. ಪ್ರಾಧೀಕರಣದ ನಂತರ ಸೇವಾ ಪುಸ್ತಕವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಿಂತಿರುಗಿಸಬೇಕು.

5) ಪಿಂಚಣಿ ಪ್ರಾಧೀಕರಿಸಿರುವ ಆದೇಶಗಳನ್ನು ತಪಾಸಣೆ ಮಾಡುವ ಬಗ್ಗೆ –

ಜಿಲ್ಲೆಗಳಲ್ಲಿರುವ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಸಹಾಯಕ ನಿರ್ದೇಶಕರುಗಳು ಪ್ರಾಧೀಕರಿಸಿರುವ ಪಿಂಚಣಿ ಆದೇಶಗಳನ್ನು " ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ನಿರ್ದೇಶನಾಲಯ, ಬೆಂಗಳೂರು " ಇವರು ಸಹಾಯಕ ನಿರ್ದೇಶಕರ ಕಛೇರಿಯ ವಾರ್ಷಿಕ ತಪಾಸಣೆ ಸಮಯದಲ್ಲಿ ಮಾಡತಕ್ಕದ್ದು.

ನಿಯಮಗಳ ಕಿರುಹೊತ್ತಿಗೆ

ನಿವೃತ್ತಿ ವೇತನ ಮತ್ತು ಉಪದಾನ:

ನಿವೃತ್ತಿಯ ನಂತರ ನೌಕರನು ತನಗೆ ಅನ್ವಯವಾಗುವ ಪಿಂಚಣಿ ಯೋಜನೆಯಡಿಯಲ್ಲಿ ತನ್ನ ಜೀವನ ಪೂರ್ತಿ ಮಾಸಿಕ ಪಿಂಚಣಿ ಸಂದಾಯವನ್ನು ಮತ್ತು ತಾನು ಮಾಡಿದ ಸೇವಾ ಅವಧಿಗೆ ಅನುಗುಣವಾಗಿ ಉಪದಾನವನ್ನು ಇಡುಗಂಟಾಗಿ ನಿವೃತ್ತಿಯಾಗುವ ಸಮಯದಲ್ಲಿ ಪಡೆಯುತ್ತಾನೆ. ಸರ್ಕಾರಿ ನೌಕರನು ಮರಣ ಹೊಂದಿದ ಪಕ್ಷದಲ್ಲಿ ಅವನ ಕುಟುಂಬವು ಮಾಹೆಯಾನ ಕುಟುಂಬ ನಿವೃತ್ತಿ ವೇತನವನ್ನು ಕೆಲವು ನಿಯಮಗಳಿಗನುಸಾರವಾಗಿ ಜೀವನ ಪೂರ್ತಿ ಪಡೆಯಬಹುದು.

ನಿವೃತ್ತಿ ವೇತನಗಳ ವರ್ಗೀಕರಣ

I. **ಪರಿಹಾರ ನಿವೃತ್ತಿ ವೇತನ (**KCSR Rule 259-272)
ಖಾಯಂ ನೌಕರಿಯಲ್ಲಿರುವ ನೌಕರನು ಅವನ ಹುದ್ದೆಯು ರದ್ದಾಗಿ ಅವನು ಸೇವೆಯಿಂದ ಬಿಡುಗಡೆಯಾದಾಗ ಅವನಿಗೆ ಸರಿಸಮಾನವಾದ ಹುದ್ದೆಯನ್ನು ಕೊಡಲಾಗದಿದ್ದಾಗ ನೀಡುವ ನಿವೃತ್ತಿ ವೇತನ.

II. **ಅಸಮರ್ಥತಾ/ಅಶಕ್ತತಾ ನಿವೃತ್ತಿ ವೇತನ (**KCSR Rule 273-282)
ಸರ್ಕಾರಿ ನೌಕರನು ದೈಹಿಕವಾಗಿ ಅಥವಾ ಮಾನಸಿಕವಾಗಿ ಖಾಯಂ ಆಗಿ ಸಾರ್ವಜನಿಕ ಸೇವೆಗೆ ಅಶಕ್ತನೆಂದು ವೈದ್ಯಕೀಯ ಅಧಿಕಾರವು ಘೋಷಿಸಿದರೆ ನೀಡುವ ನಿವೃತ್ತಿ ವೇತನ.

III. **ವಯೋ ನಿವೃತ್ತಿ ವೇತನ** (KCSR Rule 283)
ನಿರ್ದಿಷ್ಟಪಡಿಸಿದ ವಯಸ್ಸಿಗೆ ನಿವೃತ್ತನಾಗಲು ಹಕ್ಕುಳ್ಳ ಅಥವಾ ಒತ್ತಾಯಪಡಿಸಿದ ಸರ್ಕಾರಿ ನೌಕರನಿಗೆ ಮಂಜೂರು ಮಾಡುವ ನಿವೃತ್ತಿ ವೇತನ.

IV. **ವಿಶ್ರಾಂತಿ ನಿವೃತ್ತಿ ವೇತನ** (KCSR Rule 285)
ಸ್ವಇಚ್ಛಾ ಮತ್ತು ಕಡ್ಡಾಯ ನಿವೃತ್ತಿ ಪ್ರಕರಣಗಳಲ್ಲಿ ಮಂಜೂರು ಮಾಡುವ ನಿವೃತ್ತಿ ವೇತನ.

ಇತರ ನಿವೃತ್ತಿ ವೇತನಗಳು:-

ನಿರೀಕ್ಷಾ ನಿವೃತ್ತಿ ವೇತನ (KCSR Rule 341)
ನಿಗಧಿಪಡಿಸಿದ ವೇಳಾಪಟ್ಟಿಯ ಪ್ರಕಾರ ಪಿಂಚಣಿ ದಾಖಲಾತಿಗಳನ್ನು ಮಹಾಲೇಖಪಾಲರಿಗೆ ಕಳುಹಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಕಚೇರಿ ಮುಖ್ಯಸ್ಥರು ಮಂಜೂರು ಮಾಡುವ ನಿವೃತ್ತಿ ವೇತನ.

ತಾತ್ಕಾಲಿಕ ನಿವೃತ್ತಿ ವೇತನ (KCSR Rule 214)
ಸೇನೆಯಿಂದ ನಿವೃತ್ತನಾದ ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆ ಅಥವಾ ನ್ಯಾಯಾಲಯ ಪ್ರಕರಣ ಬಾಕಿ ಇರುವ ಸಂದರ್ಭದಲ್ಲಿ 214ಎ ನಿಯಮದನುಸಾರ ಮಂಜೂರು ಮಾಡುವ ನಿವೃತ್ತಿ ವೇತನ.

ಅನುಕಂಪ ಭತ್ಯೆ ಪಾವತಿ((KCSR Rule 217)
ಸರ್ಕಾರಿ ನೌಕರನನ್ನು ದುರ್ನಡತೆ ಅಥವಾ ಇತರೆ ಯಾವುದೇ ಕಾರಣದಿಂದಾಗಿ ಸೇವೆಯಿಂದ ವಜಾ ಮಾಡಿದರೆ ಅಥವಾ ತೆಗೆದು ಹಾಕಿದರೆ ಅಂತಹ ನೌಕರನಿಗೆ ಅವನು ಅಶಕ್ತತಾ ನಿವೃತ್ತಿ ಹೊಂದಿದ್ದರೆ ಲಭ್ಯವಾಗುವ ನಿವೃತ್ತಿ ವೇತನದ 2/3 ಅನುಕಂಪ ಭತ್ಯೆಯನ್ನು ವಿಶೇಷ ಸಂದರ್ಭಗಳಿಗನುಗುಣವಾಗಿ ಮಂಜೂರು ಮಾಡಲಾಗುತ್ತದೆ.

ಮುನ್ಸಿಪಲ್ ನೌಕರರಿಗೆ ಪಿಂಚಣಿ / ಕುಟುಂಬ ಪಿಂಚಣಿಗೆ ಅನ್ವಯಿಸುವ ನಿಯಮಗಳು

1. ಕರ್ನಾಟಕ ಮುನ್ಸಿಪಾಲಿಟಿಗಳ (Conditions of services of officers and servants)ನಿಯಮಾವಳಿಗಳು, 1972.
2. ಕರ್ನಾಟಕ ಮುನ್ಸಿಪಾಲಿಟಿಗಳ (Conditions of services of officers and servants)ನಿಯಮಾವಳಿಗಳು, 1987.
3. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು

4. ಕರ್ನಾಟಕ Commutation of Pension Rules, 1957 and 2002
5. ಕರ್ನಾಟಕ ಅಸಾಧಾರಣ ನಿವೃತ್ತಿ ವೇತನ ನಿಯಮಗಳು, 1957 ಮತ್ತು 2003.
6. ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ವೇತನ ನಿಯಮಗಳು) 1964 ಮತ್ತು 2002.

ಅರ್ಹತೆ ಮತ್ತು ಅರ್ಹತಾದಾಯಕ ಸೇವೆ:–

ಮುನ್ಸಿಪಲ್ ನೌಕರರ ನೇಮಕಾತಿ ಬಡ್ತಿ, ಪರೀಕ್ಷಾ ಪೂರ್ವಾವಧಿ ಮತ್ತು ಉತ್ತೀರ್ಣರಾಗಬೇಕಾದ ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದ ನಿಯಮಾವಳಿಗಳು

1. ಕರ್ನಾಟಕ ಮುನ್ಸಿಪಾಲಿಟಿಗಳ (Recruitment of Servants) ನಿಯಮಾವಳಿಗಳು 1971
2. ಕರ್ನಾಟಕ ಮುನ್ಸಿಪಾಲಿಟಿಗಳ (Recruitment of officers and employees) ನಿಯಮಾವಳಿಗಳು 2004.
3. ಕರ್ನಾಟಕ ಮುನ್ಸಿಪಾಲಿಟಿಗಳ (Recruitment of officers and employees) ನಿಯಮಾವಳಿಗಳು 2010.

ಕುಟುಂಬ ಪಿಂಚಣಿ

ಸರ್ಕಾರಿ ನೌಕರನು ಸೇವೆಯಲ್ಲಿರುವಾಗ ಅಥವಾ ನಿವೃತ್ತನಾದ ನಂತರ ಮೃತಪಟ್ಟಲ್ಲಿ ಮೃತನಾದ ದಿನದ ಮಾರನೇ ದಿನದಿಂದ ಕುಟುಂಬದ ಅರ್ಹ ಒಬ್ಬ ಸದಸ್ಯನಿಗೆ ಮಾಹೆಯಾನ ನೀಡುವ ಪಿಂಚಣಿ.

ಅರ್ಹ ವ್ಯಕ್ತಿಗಳು:–

1) ಹೆಂಡತಿ
2) ಗಂಡ
3) ಅಪ್ರಾಪ್ತ ಮಕ್ಕಳು
4) ಅಪ್ರಾಪ್ತ ಅವಿವಾಹಿತ ಹೆಣ್ಣು ಮಕ್ಕಳು

ಉಪದಾನಕ್ಕಾಗಿ ಅರ್ಹ ವ್ಯಕ್ತಿಗಳು:–

1) ಹೆಂಡತಿ ಅಥವಾ ಗಂಡ
2) ಮಕ್ಕಳು (ದತ್ತು ಮಕ್ಕಳೂ ಸೇರಿರುತ್ತಾರೆ)
3) ಅವಿವಾಹಿತ / ವಿಧವಾ / ವಿಚ್ಛೇದಿತ ಹೆಣ್ಣು ಮಕ್ಕಳು
4) 18 ವರ್ಷ ಒಳಗಿನ ತಮ್ಮಂದಿರು
5) ಅವಿವಾಹಿತ / ವಿಧವಾ / ವಿಚ್ಛೇದಿತ ತಂಗಿಯರು
6) ತಂದೆ / ತಾಯಿ.
7) ವಿವಾಹಿತ ಮಗಳು
8) ಮೃತ ಮಗನ ಮಕ್ಕಳು

ಇತ್ಯರ್ಥವಾಗಿರುವ ಮುನ್ಸಿಪಲ್ ನೌಕರರ ಪಿಂಚಣೀ ಪ್ರಕರಣಗಳಲ್ಲಿ ಕಂಡುಬಂದಿರುವ ನ್ಯೂನತೆಗಳು ಮತ್ತು ಇತ್ಯರ್ಥ ಮಾಡಬೇಕಾಗಿರುವ ಪಿಂಚಣಿ ಪ್ರಕರಣಗಳಲ್ಲಿ ಎದುರಾಗಬಹುದಾದಂತಹ ಸಮಸ್ಯೆಗಳಿಗೆ ನಿವಾರಣೋಪಾಯ ಮಾರ್ಗಸೂಚಿಗಳು

ಕ್ರ. ಸಂ.	ಸಮಸ್ಯೆ	ವಿವರಣೆ
1	ಮುನ್ಸಿಪಲ್ ನೌಕರರು ಇತರೆ ಸ್ಥಳೀಯ ಸಂಸ್ಥೆಗಳು/ಸ್ವಾಯುತ್ತ ಸಂಸ್ಥೆಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಅರ್ಹ ಸೇವೆ ಎಂದು ಪರಿಗಣಿಸುವ ಬಗ್ಗೆ.	ಪಂಚಾಯಿತಿಯಿಂದ ಮುನ್ಸಿಪಾಲಿಟಿಯಾಗಿ, ಮುನ್ಸಿಪಾಲಿಟಿ ಯಿಂದ ಪಂಚಾಯಿತಿ / ಮಂಡಲ್ ಪಂಚಾಯಿತಿ / ನಗರ ಪಾಲಿಕೆಯಾಗಿ ಪರಿವರ್ತನೆಯಾಗಿರುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ / ಕೆಲಸ ಮಾಡುತ್ತಿದ್ದ ನೌಕರರ ಪ್ರಕರಣಗಳಲ್ಲಿ ಮಾತ್ರ ಪರಿವರ್ತನೆಗೆ ಮೊದಲು ಮತ್ತು ಪರಿವರ್ತನೆಯ ನಂತರದ ಸೇವೆಯನ್ನು ಅರ್ಹ ಸೇವೆಯೆಂದು ಪರಿಗಣಿಸಲು 1972ರ ಕರ್ನಾಟಕ ಮುನ್ಸಿಪಾಲಿಟಿಗಳ (ಸಿ.ಎಸ.ಒ.ಎಸ್) ನಿಯಮಾವಳಗಳ (103 ಮತ್ತು 106ನೇ ನಿಯಮ) ಸಂಖ್ಯೆ: ಹೆಚ್.ಯು.ಡಿ/ಎಂ.ಎಲ್.ಆರ್/84, ದಿನಾಂಕ: 28.05.1984 ಮತ್ತು 1991ರ ಕೆ.ಸಿ.ಸಿ.ಇ. (ಸಿ.ಒ.ಎಸ್.) 5(3)ನೇ ನಿಯಮದ ಪ್ರಕಾರ ಅವಕಾಶವಿರುತ್ತದೆ. ಆದರೆ, ಮುನ್ಸಿಪಲ್ ನೌಕರರು ಸ್ವಾಯುತ್ತ ಸಂಸ್ಥೆಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಅರ್ಹ ಸೇವೆಯೆಂದು ಪರಿಗಣಿಸಬೇಕಾದಲ್ಲಿ ಸಂಬಂಧಪಟ್ಟ ಸಂಸ್ಥೆಯವರು ಪಿಂಚಣಿ ವಂತಿಗೆಯನ್ನು ಪಾವತಿ ಮಾಡುವ ಷರತ್ತಿನ ಮೇಲೆ ಕೆ.ಸಿ.ಎಸ್.ಆರ್.222ನೇ ನಿಯಮಕ್ಕೆ ಸರ್ಕಾರದಿಂದ ಸಡಿಲಿಕೆ ಪಡೆಯಬೇಕಾಗುತ್ತದೆ. 1983ರ ಜಿಲ್ಲಾ ಪರಿಷತ್ ಕಾಯ್ದೆಯ 228(ಜಿ) ವಿಧಿಯ ಪ್ರಕಾರ ಮಂಡಲ್ ಪಂಚಾಯಿತಿಯಾಗಿ ಪರಿವರ್ತನೆಯಾಗಿರುವ ಮುನ್ಸಿಪಲ್ ನೌಕರರ ಪ್ರಕರಣದಲ್ಲಿ ಮಂಡಲ್ ಪಂಚಾಯತ್ ಸೇವೆಯನ್ನು ಅರ್ಹ ಸೇವೆಯೆಂದು ಪರಿಗಣಿಸಲು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಸಂಖ್ಯೆ: ಆರ್.ಡಿ.ಪಿ/205/ಜ಼ಡ್.ಪಿ.ಟಿ/89, ದಿನಾಂಕ: 09.09.1992 ರಲ್ಲಿ ಆದೇಶ ಹೊರಡಿಸಿರುತ್ತಾರೆ. ಆದರೆ, ಈ ಆದೇಶ ಹೊರಡಿಸಿದ ನಂತರ 1993ರ ಪಂಚಾಯತ್ ರಾಜ್ ಕಾಯ್ದೆಯ ಪ್ರಕಾರ ಗ್ರಾಮ ಪಂಚಾಯಿತಿಯಾಗಿ ಪರಿವರ್ತನೆ ಯಾಗಿರುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸೇವೆಯನ್ನು ಅರ್ಹ ಸೇವೆ ಎಂದು ಪರಿಗಣಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಆದೇಶವನ್ನು ಪಡೆದು ಕೊಳ್ಳಬೇಕು.

2	ಪಿಂಚಣಿ ಪ್ರಪತ್ರಗಳನ್ನು ನಿಗಧಿತ ನಮೂನೆಗಳಲ್ಲಿ ಪಡೆದುಕೊಳ್ಳದಿರುವುದು.	ಸುತ್ತೋಲೆ ಸಂಖ್ಯೆ:ಆಇ 9/5/ಸಂತಪ/88, ದಿನಾಂಕ: 15.04.1988ರ ಹಾಗೂ ಕೆ.ಸಿ.ಎಸ್.ಆರ್.ನಿಯಮ 333ರಲ್ಲಿ ನಿಗಧಿಪಡಿಸಿರುವ ಪ್ರಶ್ನಾವಳಿಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಕಳುಹಿಸುವಂತೆ ಸ್ಥಳೀಯ ಸಂಸ್ಥೆಗಳಿಗೆ ತಿಳಿಯಪಡಿಸುವುದು.
3	ಸೇವೆಯಲ್ಲಿರುವಾಗಲೇ ನಿಧನರಾಗಿರುವ ಪ್ರಕರಣಗಳಲ್ಲಿ ದಾಖಲೆಗಳನ್ನು ಪೂರ್ಣಪ್ರಮಾಣದಲ್ಲಿ ಪಡೆದುಕೊಳ್ಳದಿರುವುದು.	1964 ಮತ್ತು 2002ರ ಕುಟುಂಬ ಪಿಂಚಣಿ ನಿಯಮಾವಳಿಗೂ ಮತ್ತು 11ನೇ ನಿಯಮದಲ್ಲಿ ತಿಳಿಸಿರುವಂತೆ, ನಮೂನೆ 9 ಮತ್ತು ನಮೂನೆ 'ಸಿ'ಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳುವುದು. ಅಪ್ರಾಪ್ತ ವಯಸ್ಕರ ಪ್ರಕರಣಗಳಲ್ಲಿ ವಯಸ್ಸನ್ನು ನಿರ್ಧರಿಸಲು ಶಾಲಾ ಪ್ರಮಾಣ ಪತ್ರ ಅಥವಾ ಸ್ಥಳೀಯ ಸಂಸ್ಥೆಯವರು ನೀಡಿರುವ ಜನ್ಮ ದಿನಾಂಕದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದರ ಜೊತೆಗೆ, 345ಬಿ ನಿಯಮದಲ್ಲಿನ ಸೂಚನೆಗಳನ್ನು ಪಾಲಿಸುವುದು.
4	1) ಸ್ಥಗಿತ ವೇತನ ಬಡ್ತಿ ಮಂಜೂರಾತಿ. 2) ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿರುವ ಬಗ್ಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಕುರಿತು. 3) ಕಾಲಮಿತಿ ವೇತನ ಬಡ್ತಿಯನ್ನು Non SSLC ಮುನ್ಸಿಪಲ್ ನೌಕರರಿಗೆ ಮಂಜೂರು ಮಾಡಿರುವುದು. 4) ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡಿರುವ ಬಗ್ಗೆ. 5) ಸತತವಾಗಿ 20 ವರ್ಷ ಸೇವೆ ಸಲ್ಲಿಸಿರುವ ನೌಕರನಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿರುವ ಬಗ್ಗೆ 6) ವಾರ್ಷಿಕ ವೇತನ ಬಡ್ತಿ ದಿನಾಂಕಗಳನ್ನು ನಿರ್ಧರಿಸುವಲ್ಲಿ ದೋಷ ಕಂಡುಬರುತ್ತಿರುವ ಬಗ್ಗೆ. 7) ಪದವಿಯನ್ನು ಪಡೆದಿರುವ ಕಾರಣಕ್ಕಾಗಿ ಲಭ್ಯವಾಗುವ ಹೆಚ್ಚುವರಿ ವೇತನ ಬಡ್ತಿಗಳ ಬಗ್ಗೆ	1) ಮುನ್ಸಿಪಲ್ ನೌಕರರಿಗೆ 5 ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವ ವಿಧಾನವನ್ನು ದಿನಾಂಕ:10.10.2002 ರಿಂದ ಜಾರಿಗೊಳಿಸಲಾಗಿದೆ. 2) ನಗರ ಪಾಲಿಕೆ ನೌಕರರ ಪ್ರಕರಣಗಳಲ್ಲಿ 3 ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ವಿಧಾನವನ್ನು 1.12.1987 ರಿಂದಲೂ, 5 ಸ್ಥಗಿತ ವೇತನ ಬಡ್ತಿಗಳನ್ನು ದಿನಾಂಕ:29.11.2001ರಿಂದಲೂ ಜಾರಿಗೆ ನೀಡಲಾಗಿದೆ. ಮುನ್ಸಿಪಲ್ ನೌಕರರಿಗೆ 1974ರ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ವಿಸ್ತರಿಸಿಲ್ಲವಾದ್ದರಿಂದ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ. ಇಂತಹ ಹೆಚ್ಚುವರಿ ವೇತನ ಭತ್ಯೆಗಳನ್ನು ವಸೂಲು ಮಾಡಲು ನಗರಾಭಿವೃದ್ಧಿ ಇಲಾಖೆಯು ದಿನಾಂಕ:20.07.1982ರಲ್ಲಿ ಸುತ್ತೋಲೆ ಮೂಲಕ ಸೂಚನೆ ನೀಡಿರುತ್ತದೆ. Non SSLC ಮುನ್ಸಿಪಲ್ ನೌಕರರಿಗೆ (ದ್ವಿತೀಯ ದರ್ಜೆ ಮತ್ತು ಸಮಾನ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು) ಮಂಜೂರಾಗಿರುವ ಕಾಲಮಿತಿ ವೇತನ ಬಡ್ತಿ ಸೌಲಭ್ಯವನ್ನು ತಾತ್ಕಾಲಿಕವಾಗಿ ಕಡೆಗಣಿಸಿ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡುವುದು ಮತ್ತು ಸದರಿ ಸೌಲಭ್ಯವನ್ನು ಪರಿಗಣಿಸಬೇಕೇ? ಅಥವಾ ಬೇಡವೇ ಎಂಬ ಬಗ್ಗೆ ಪ್ರತಿಯೊಂದು ಪ್ರಕರಣದಲ್ಲಿಯೂ ಪೌರಾಡಳಿತ ಇಲಾಖೆ ಯಿಂದ ಆದೇಶವನ್ನು ಪಡೆದುಕೊಂಡು ಸಲ್ಲಿಸುವಂತೆ ಸ್ಥಳೀಯ ಸಂಸ್ಥೆಯವರಿಗೆ ತಿಳಿಸುವುದು. ಸ್ವಯಂಚಾಲಿತ ವೇತನ ಬಡ್ತಿ ಸೌಲಭ್ಯವನ್ನು ಕಾಲಮಿತಿ ವೇತನ ಬಡ್ತಿ ಶ್ರೇಣಿಗಿಂತ ಹೆಚ್ಚುವರಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಿರುವ ಪ್ರಕರಣಗಳಲ್ಲಿ 1971ರ ಕರ್ನಾಟಕ ಮುನ್ಸಿಪಾಲಿಟಿ ನಿಯಮಾವಳಿಗಳ ಪ್ರಕಾರ ಬಡ್ತಿ ಹುದ್ದೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವುದು. ಬಡ್ತಿ ಹುದ್ದೆ ಇಲ್ಲದಿದ್ದಲ್ಲಿ ಆರ್ಥಿಕ ಇಲಾಖೆಯವರು ದಿನಾಂಕ: 08.02.1993ರ ಪತ್ರದಲ್ಲಿ ಮಹಾಲೇಖಾಪಾಲರಿಗೆ ನೀಡಿರುವ ಸ್ಪಷ್ಟೀಕರಣದಂತೆ ಕ್ರಮ ಕೈಗೊಳ್ಳುವುದು. ಸೇವಾವಧಿಯಲ್ಲಿ ಯಾವುದೇ ಮುಂಬಡ್ತಿ ಸೌಲಭ್ಯವನ್ನು ಪಡೆಯದಿರುವ ನೌಕರರಿಗೆ ಮಾತ್ರ ಈ ಆದೇಶವನ್ನು ಸೀಮಿತಗೊಳಿಸುವುದು. ಅಮಾನತ್ತಿನ ಪ್ರಕರಣಗಳಲ್ಲಿ ಅಮಾನತ್ತಿನ ಅವಧಿಯನ್ನು ನಿವೃತ್ತಿ / ನಿಧನರಾಗುವ ದಿನಾಂಕದವರೆಗೆ ಸಕ್ರಮಗೊಳಿಸದಿರುವುದು ಅಥವಾ ಅಮಾನತ್ ಅವಧಿಯನ್ನು ಅಮಾನತ್ / ವೇತನ ರಹಿತ ರಜಾ ಎಂದು ಪರಿಗಣಿಸಿದ ಸಂದರ್ಭಗಳಲ್ಲಿ ಅಥವಾ ನೌಕರನು ಒಂದು ವರ್ಷದಲ್ಲಿ 30 ದಿನ ಅಥವಾ ಅದಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ನೌಕರನಿಗೆ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ಮುಂದೂಡುವ ಮೂಲಕ ಸಕ್ರಮಗೊಳಿಸಬೇಕಾಗುತ್ತದೆ. ಮುನ್ಸಿಪಲ್ ನೌಕರರು 31.12.1976ಕ್ಕೆ ಮೊದಲು ಪದವಿಯನ್ನು ಪಡೆದಿದ್ದಲ್ಲಿ ಮಾತ್ರ ಹೆಚ್ಚುವರಿ ವೇತನ ಲಭ್ಯವಾಗುತ್ತದೆ. ದಿನಾಂಕ:01.01.1977ರ ನಂತರ ಆದೇಶವನ್ನು ಕಡೆಗಣಿಸಿ ವೇತನ ಬಡ್ತಿ ಮಂಜೂರು ಮಾಡಿದ್ದಲ್ಲಿ ಅಂತಹ ಭತ್ಯೆಗಳನ್ನು ವಸೂಲು ಮಾಡುವಂತೆ ಸಂಬಂಧಪಟ್ಟ ಸಂಸ್ಥೆಯವರಿಗೆ ತಿಳಿಸಬಹುದು.
5	ಸೇವಾ ಪುಸ್ತಕಗಳ ನಿರ್ವಹಣೆ ಯಲ್ಲಿ ಕಂಡು ಬರುತ್ತಿರುವ ದೋಷಗಳ ಬಗ್ಗೆ ಗಮನ ನೀಡದಿರುವುದು.	ನೌಕರರ ಜನ್ಮ ದಿನಾಂಕದ ದೃಢೀಕರಣ, ವೇತನ ಶ್ರೇಣಿಗಳ ಮಂಜೂರಾತಿ, ವೇತನ ನಿಗದೀಕರಣ ಮುಂತಾದ ಸೇವಾ ವಿವರಗಳನ್ನು ನಮೂದಿಸಿ ದೃಢೀಕರಿಸುವುದು. ಅಮಾನತ್, ಸೇವೆಯಿಂದ ವಜಾ ಮುಂತಾದ ಶಿಕ್ಷೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸೇವಾ ಪುಸ್ತಕದಲ್ಲಿ ಅಂಟಿಸದಿರುವುದು. ನಾಮನಿರ್ದೇಶನ ಪತ್ರ ಹಾಗೂ ಕುಟುಂಬ ಸದಸ್ಯರ ವಿವರಗಳನ್ನು ಅಂಟಿಸದಿರುವುದು ಕಂಡುಬರುತ್ತದೆ.
6	ವೇತನ ನಿಗದೀಕರಣ ಬಗೆಗಿನ ದೋಷಗಳು	1977ರ ನಂತರ ವೇತನ ನಿಗದೀಕರಣಕ್ಕೆ ಸಂಬಂಧಿಸಿದ ಉದಾಹರಣೆಗಳು ಪರಿಷ್ಕೃತ ವೇತನ ಶ್ರೇಣಿ ನಿಯಮಾವಳಿಗಳ ಪುಸ್ತಕದಲ್ಲೇ ಕಂಡು ಬರುತ್ತಿದ್ದರೂ ಸಹ ಇವುಗಳನ್ನು ಗಮನಿಸದೇ ಇರುವುದು ಕಂಡು ಬಂದಿರುತ್ತದೆ.
7	ಇಬ್ಬರು ಪತ್ನಿಯರಿಗೆ ಕುಟುಂಬ ಪಿಂಚಣಿ ಮಂಜೂರು ಮಾಡುವುದು.	ಮುನ್ಸಿಪಲ್ ನೌಕರನು 2ನೇ ಮದುವೆ ಮಾಡಿಕೊಳ್ಳುವ ಮೊದಲು ಅನುಮತಿ ಪಡೆದಿರುವ ಬಗ್ಗೆ ಸೇವಾ ಪುಸ್ತಕದಲ್ಲಿ ದಾಖಲಿಸುವಂತೆ ಸಂಸ್ಥೆಯವರಿಗೆ ತಿಳಿಸಬೇಕು.
8	ಸ್ವಇಚ್ಛಾ ನಿವೃತ್ತಿ ಪ್ರಕರಣದಲ್ಲಿ ಅರ್ಹತಾ ಸೇವೆಯ ಪ್ರಮಾಣ ವನ್ನು ಮುಂಚಿತವಾಗಿ ಪರಿಶೀಲಿಸದಿರುವ ಬಗ್ಗೆ.	15 ವರ್ಷ ಸೇವೆ ಸಲ್ಲಿಸಿದ ನಂತರ ಸ್ವಇಚ್ಛೆಯ ಮೇರೆಗೆ ನಿವೃತ್ತಿ ಪಡೆಯಲು ಉದ್ದೇಶಿಸಿರುವ ನೌಕರರ ಸೇವಾ ಪುಸ್ತಕವನ್ನು ಪರಿಶೀಲನೆಗಾಗಿ ವರ್ತುಲ ಕಚೇರಿಗೆ ಕಳುಹಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಇದರಿಂದ ಉದ್ಭವಿಸುವ ಸಮಸ್ಯೆಗಳ ಬಗ್ಗೆ ನಿಯಮದ ಪಾಲನೆ ಕುರಿತು ಸುತ್ತೋಲೆಯ ಮೂಲಕ ಸೂಚನೆಗಳನ್ನು ನೀಡಬಹುದು.

9	ಅರ್ಹತಾ ಸೇವೆಯನ್ನು ಲೆಕ್ಕ ಹಾಕುವಾಗ ತಾತ್ಕಾಲಿಕ ಸೇವೆಯನ್ನು ಪರಿಗಣಿಸದಿರುವುದು.	ಕೆ.ಸಿ.ಎಸ್.ಆರ್. ನಿಯಮಗಳು 224ರಿಂದ 226ರವರೆಗಿನ ನಿಯಮದ ಪ್ರಕಾರ ತಾತ್ಕಾಲಿಕ ಸೇವೆಯನ್ನು ಪೂರ್ಣ ಪ್ರಮಾಣದ ಅರ್ಹ ಸೇವೆಯೆಂದು ಪರಿಗಣಿಸಬಹುದಾದರೂ ಸಹ ತಾತ್ಕಾಲಿಕ ಸೇವೆ ಎಂಬ ನೆಪದಲ್ಲಿ ಭಾರೀ ಮೊತ್ತದ ವಸೂಲಾತಿಗೆ ಸೂಚಿಸಿರುವುದನ್ನು ಗಮನಿಸಲಾಗಿದದು, ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ ವಾಗಿರುತ್ತದೆ.
10	ಕನಿಷ್ಠ ಪಿಂಚಣಿಯನ್ನೂ ಸಹ ಪ್ರಾಧೀಕರಿಸದಿರುವುದು.	1) ದಿನಗೂಲಿ ನೌಕರರ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಪ್ರಕರಣಗಳಲ್ಲಿ ಕನಿಷ್ಠ 10 ವರ್ಷ ಅಥವಾ 15 ವರ್ಷ (1.9.2003ರಿಂದ) ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರಕರಣಗಳಲ್ಲಿ ಪಿಂಚಣಿ ದಾಖಲೆಗಳಲ್ಲಿ ನ್ಯೂನತೆಗಳಿದ್ದರೂ ಕನಿಷ್ಠ ಪಿಂಚಣಿಯನ್ನಾದರೂ ಕಡ್ಡಾಯವಾಗಿ ಪ್ರಾಧೀಕರಿಸಿ ನ್ಯೂನತೆಗಳನ್ನು ನಂತರ ಸರಿಪಡಿಸಿಕೊಳ್ಳಬಹುದು. 2) ನೌಕರನು ಅಮಾನತ್ತಿನ ಶಿಕ್ಷೆಗೆ ಒಳಗಾಗಿದ್ದರೆ ಅಥವಾ ವೇತನ ರಹಿತ ರಜೆಯಲ್ಲಿದ್ದರೆ, ಅಮಾನತ್ ಅವಧಿ/ವೇತನ ರಹಿತ ರಜೆಯ ಅವಧಿಯನ್ನು ಹೊರತುಪಡಿಸಿ ನೌಕರನು ಹಿಂದೆ ಸಲ್ಲಿಸಿರುವ ಸೇವೆ ಅಥವಾ ಮುಂದೆ ಸಲ್ಲಿಸಬಹುದಾದ ಯಾವುದೇ ಸೇವೆಯ ಮೇಲೆ ಪರಿಣಾಮ ಬೀರುವುದಿಲ್ಲ. ಕಾರಣವೇನೆಂದರೆ ಒಬ್ಬ ನೌಕರನ 6 ತಿಂಗಳ ಅಮಾನತ್ ಸೇವೆಯನ್ನು ಸಕ್ರಮಗೊಳಿಸಿಲ್ಲವೆಂಬ ಕಾರಣಕ್ಕಾಗಿ ಕನಿಷ್ಠ ಪಿಂಚಣಿಯನ್ನೂ ಸಹ ಪ್ರಾಧೀಕರಿಸದೇ ವಿಳಂಬ ಮಾಡಿರುವ ಉದಾರಹಣೆಯೊಂದು ಕಂಡು ಬಂದಿದೆ.
11	ನ್ಯಾಯಾಲಯಗಳಿಗೆ ಒದಗಿಸುವ ಮಾಹಿತಿಯಲ್ಲಿ ದೋಷಗಳು ಕಂಡುಬಂದಿರುವುದು.	ಕಾರಣವೇನೆಂದರೆ, ನ್ಯಾಯಾಲಯಕ್ಕೆ ಒದಗಿಸುವ ಮಾಹಿತಿಯಲ್ಲಿ ಯಾವುದೇ ಬೆರಳಚ್ಚು ನಿಖರವಲ್ಲದ ಮಾಹಿತಿ ದೋಷಗಳು ಇಲ್ಲದಂತೆ ಎಚ್ಚರ ವಹಿಸತಕ್ಕದ್ದು.
12	ಪಿಂಚಣಿ ಸೌಲಭ್ಯಗಳ ಇತ್ಯರ್ಥದಲ್ಲಿ ಉದ್ಭವಿಸುವ ಸಾಮಾನ್ಯ ನ್ಯೂನತೆಗಳ ನಿವಾರಣೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ.	ಸರ್ಕಾರದ ಸುತ್ತೋಲೆ ಸಂಖ್ಯೆ:ಎಫ್‌ಡಿ(Special) 1/ಸಿಪಿಪಿ 84, ದಿನಾಂಕ: 14.01.1987ರಲ್ಲಿ ಮಾರ್ಗಸೂಚಿಗಳನ್ನು ಗಮನಿಸುವುದು.
13	ನಿಗಧಿತ ಅವಧಿಯೊಳಗೆ ಪಿಂಚಣಿ ಪ್ರಕರಣಗಳ ವಿಲೇವಾರಿಗೆ ಕ್ರಮ ವಹಿಸುವ ಬಗ್ಗೆ.	ಆದೇಶ ಸಂಖ್ಯೆ:ಆರ್ಥಿಕ(ವಿಶೇಷ) 286 ಪಿಇಎನ್ 91(ಎ) ದಿನಾಂಕ:13.7.1992 ಮತ್ತು ಕೆ.ಸಿ.ಎಸ್.ನಿಯಮ 347ಎ ರಲ್ಲಿನ ಮಾರ್ಗಸೂಚಿಗಳನ್ನು ಗಮನಿಸುವುದು ಹಾಗೂ ನಿಯಮ 321ರ ಷರತ್ತುಗಳನ್ನು ಪೂರೈಸಲು ಸಂಬಂಧಿಸಿದ ಸಂಸ್ಥೆಗಳಿಗೆ ಸೂಚನೆ ನೀಡುವುದು.
14	ವೇತನ ನಿಗಧಿ, ನ್ಯೂನತೆಗಳಿಗಾಗಿ ತಡೆಹಿಡಿದಿರುವ ನಿವೃತ್ತಿ ಉಪದಾನ / ಮರಣ ಉಪದಾನ ಬಿಡುಗಡೆ ಬಗ್ಗೆ.	ವೇತನ ನಿಗಧಿಯಲ್ಲಿನ ದೋಷಗಳಿಗಾಗಿ ವರ್ತುಲ ಕಚೇರಿಗಳಲ್ಲಿ ಪಿಂಚಣಿ ಪ್ರಕರಣಗಳನ್ನು ಇತ್ಯರ್ಥಪಡಿಸುವಾಗ ಉಪದಾನದಲ್ಲಿ ನಿರ್ದಿಷ್ಠ ಮೊತ್ತವನ್ನು ತಡೆಹಿಡಿಯಲಾಗುತ್ತಿದ್ದು, ಈ ಮೊತ್ತವನ್ನು ತಡೆ ಹಿಡಿದ 6 ತಿಂಗಳೊಳಗಾಗಿ ಬಿಡುಗಡೆ ಮಾಡುವ ಬಗ್ಗೆ ಸಂಬಂಧಿಸಿದ ಸಂಸ್ಥೆಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ(ಆಡಳಿತ & ಮುಂಗಡ)

PR. 780

ಕಂದಾಯ ಸಚಿವಾಲಯ

ವಿಷಯ: ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳಿಪುರ ಗ್ರಾಮದ ಸ.ನಂ. 127 ರಲ್ಲಿ 283–16 ಎ/ಗು ಜಮೀನನ್ನು ರಾಜೀವ್‌ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಟೆಕ್ನಾಲಜಿ ಸ್ಥಾಪಿಸುವ ಸಲುವಾಗಿ ಕೆ.ಐ.ಎ.ಡಿ.ಬಿ. ಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಐ 333 ಎಸ್‌ಪಿಕ್ಯೂ 2010 ದಿನಾಂಕ:14–06–2010

2. ಜಿಲ್ಲಾಧಿಕಾರಿ ಬೆಂಗಳೂರು ಇವರ ಇವರ ಪತ್ರ ಸಂಖ್ಯೆ: ಎಲ್‌ಎಕ್ಯೂ/ ಸಿಆರ್/29:13–14 ದಿನಾಂಕ:31–01–2014

3. ಅಪರ ಕಾರ್ಯದರ್ಶಿ ಇವರ ಅ.ಸ.ಪ. ಸಂಖ್ಯೆ:ವಾಕೈ/20/ಅಮುಕಾ/ 2013 ದಿನಾಂಕ:29–01–2014

4. ಮಾನ್ಯ ಪೆಟ್ರೋಲಿಯಂ ಸಚಿವರು ಭಾರತ ಸರ್ಕಾರ ಇವರ ಪತ್ರ ದಿನಾಂಕ: 12–12–2013.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಕರ್ನಾಟಕ ಪ್ರದೇಶ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ, ಕಂಬಳಿಪುರ ಗ್ರಾಮದಲ್ಲಿ ಭೂ ಸ್ವಾಧೀನ ಪಡಿಸಿಕೊಂಡಿರುವ 302–11 ಎ/ಗುಂ. ಪ್ರದೇಶವನ್ನು ಕೈಗಾರಿಕಾ ಪ್ರದೇಶ ಎಂಬುದಾಗಿ ಘೋಷಿಸಿದೆ. ಇದರಲ್ಲಿ 283.16 ಎಕರೆ ಸರ್ಕಾರಿ ಜಮೀನಾಗಿದ್ದು, ಇದನ್ನು ಸರ್ಕಾರಿ ಖರಾಬು ಜಮೀನು ಎಂಬುದಾಗಿ ವರ್ಗೀಕರಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಜಿಲ್ಲಾಧಿಕಾರಿರವರ ಪತ್ರದಲ್ಲಿ 283–16 ಎ/ಗುಂ. ಸರ್ಕಾರಿ ಖರಾಬು ಜಮೀನನಲ್ಲಿ 1–20 ಎ/ಗುಂ. ಜಮೀನನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಬಾಕಿ ಉಳಿದ 281–36 ಎ/ಗುಂ. ಯಲ್ಲಿ 353 ರೈತರು ಫಾರಂ ನಂಬರ್ 53ರಡಿ ಅರ್ಜಿ ಸಲ್ಲಿಸಿದ್ದು,

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಅವರು ಕೋರಿರುವ ವಿಸ್ತೀರ್ಣ 551–15 ಎ/ಗುಂ. ಆದಾಗ್ಯೂ 36–20 ಎ/ಗುಂ. ವಿಸ್ತೀರ್ಣದಲ್ಲಿ 24 ಅರ್ಜಿದಾರರು ಸ್ವಾಧೀನದಲ್ಲಿದ್ದಾರೆ. ಈ ಜಮೀನು ಬಿಬಿಎಂಪಿ ವ್ಯಾಪ್ತಿಯೊಳಗೆ ಬರುತ್ತದೆ. ನಿಯಮಾನುಸಾರ ಈ ಎಲ್ಲಾ ಅರ್ಜಿಗಳನ್ನು **ಬಗರ್‌ಹುಕುಂ ಸಮಿತಿಯ ಮುಂದಿಟ್ಟು ವಿಲೇಮಾಡಬೇಕಾಗಿದೆ.** ಈ ಅರ್ಜಿಗಳು ವಿಲೇ ಆಗುವವರೆಗೆ ಭೂಮಿ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಮುಂದುವರೆದು ಆರ್‌ಟಿಸಿ ಯಲ್ಲಿ ತಿಳಿಸಿರುವಂತೆ 33.24 ಎಕರೆ **'ಗ್ರಾಮ ಪಂಚಾಯಿತಿ ಅರಣ್ಯ'** ಎಂಬುದಾಗಿ ವರದಿ ಮಾಡಿರುತ್ತಾರೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧಿಸೂಚನೆ ಪ್ರಕಾರ ಕಂಬಳಿಪುರ ಗ್ರಾಮದ ಸ.ನಂ.127 ರಲ್ಲಿ 283.16 ಎಕರೆ/ಗುಂಟೆ ಸೇರಿ ಒಟ್ಟು 302.11 ಎಕರೆ/ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶ ಎಂದು ಘೋಷಿಸಿದ್ದು, 283.16 ರಲ್ಲಿ 1–20 ಎಕರೆ ಜಮೀನು ದರಖಾಸ್ತು ಮೂಲಕ ವಿಲೇ ಆಗಿದ್ದು, ಉಳಿಕೆ 281.36 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣಗಳಿಗಾಗಿ ಮಂಜೂರಾತಿ ಮಾಡಿ ಹಸ್ತಾಂತರಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಅಪರ ಮುಖ್ಯ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅರೆ ಸರ್ಕಾರಿ ಪತ್ರದಲ್ಲಿ ರಾಜೀವಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಟೆಕ್ನಾಲಜಿ ಸ್ಥಾಪಿಸುವ ಸಲುವಾಗಿ ಜಮೀನನ್ನು ಮಂಜೂರು ಮಾಡಿ ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪಟ್ರೋಲಿಯಂ ಸಚಿವರು ಭಾರತ ಸರ್ಕಾರ ಇವರ ಪತ್ರ ದಿನಾಂಕ:12–12–2013ರಲ್ಲಿ ಹೊಸಕೋಟೆ ತಾಲ್ಲೂಕು, ಕಂಬಳಿಪುರ ಕೈಗಾರಿಕಾ ಕ್ಷೇತ್ರದಲ್ಲಿ 150–00 ಎಕರೆ ಜಮೀನನ್ನು ರಾಜೀವ್‌ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಟೆಕ್ನಾಲಜಿ ಸ್ಥಾಪಿಸುವ ಸಲುವಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 56 ಎಲ್‌ಜಿಬಿ 2014, ಬೆಂಗಳೂರು ದಿನಾಂಕ: 20–02–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳಿಪುರ ಗ್ರಾಮದ ಸ.ನಂ.127 ರಲ್ಲಿ 283–16 ಎ/ಗು ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳಿಗೆ ಸರ್ಕಾರದ ಅನುಮೋದನೆ ನೀಡಿದೆ.

1) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕಂಬಳಿಪುರ ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು ಇಲ್ಲಿ ಸ್ವಾಧೀನಪಡಿಸಿಕೊಂಡ 283.16 ಎ/ಗುಂ. ವಿಸ್ತೀರ್ಣದ ಸರ್ಕಾರಿ ಖರಾಬು ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ವರ್ಗಾಯಿಸಲು ಅನುಮೋದನೆ ನೀಡಿದೆ.
2) ಭೂಸ್ವಾಧೀನಗೊಂಡಿರುವ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳಿಪುರ ಗ್ರಾಮದ ಸರ್ವೆ ನಂ.127 ರಲ್ಲಿನ 150 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ 30 ವರ್ಷಗಳ ಅವಧಿಗೆ, ವಾರ್ಷಿಕ ಮಾರುಕಟ್ಟೆ ದರದ ಶೇ.10 ರಷ್ಟು ಗುತ್ತಿಗೆ ದರ ನಿಗಧಿಪಡಿಸಿ ಪ್ರತಿ 2 ವರ್ಷಗಳಿಗೊಮ್ಮೆ ಶೇ.10 ರಷ್ಟು ಪರಿಷ್ಕರಿಸುವ ಷರತ್ತಿಗೊಳಪಟ್ಟು ರಾಜೀವ್‌ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಟೆಕ್ನಾಲಜಿ ಸ್ಥಾಪಿಸುವ ಸಲುವಾಗಿ ಹಂಚಿಕೆ ಮಾಡಲು ಕೆಐಎಡಿಬಿಗೆ ಹಸ್ತಾಂತರಿಸಿದೆ.
3) ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಭೂಸ್ವಾಧೀನಪಡಿಸಿ ಕೊಳ್ಳಲಾದ ಸರ್ಕಾರಿ ಖರಾಬ್ ಜಮೀನಿಗೆ ಸಂಬಂಧಿಸಿದಂತೆ ರಾಜೀವ್‌ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಟೆಕ್ನಾಲಜಿ ರವರಿಂದ ಪಡೆಯುವ ಪರಿಹಾರ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡುವುದು.
4) ಮಂಜೂರು ಮಾಡಲು ಉದ್ದೇಶಿಸಿರುವ ಜಮೀನನ್ನು ಫಾರಂ ನಂ.53ರಲ್ಲಿ ಸಲ್ಲಿಸಿರುವ ಅರ್ಜಿಗಳು ಬಗರ್‌ಹುಕುಂ ಸಮಿತಿಯಲ್ಲಿ ಇತ್ಯರ್ಥಗೊಂಡ ನಂತರವೇ ಹಸ್ತಾಂತರಿಸುವ ಷರತ್ತಿಗೊಳಪಟ್ಟಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಮಂಜೂರಾತಿ–1).

PR. 778

SC. 50

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59